ಗೌರವಾನ್ವಿತೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಜಿ ಅವರಿಂದ ಡಾ. ಎಸ್. ಎಲ್. ಭೈರಪ್ಪ ಸ್ಮರಣಾರ್ಥ ಉದ್ಘಾಟನಾ ಉಪನ್ಯಾಸ

ನಮಸ್ಕಾರ. ವಿಕ್ರಮ್ ಸಂಪತ್, ರಾಜಲಕ್ಷ್ಮಿ ಜಿ, ದೇವೇಶ್ ವರ್ಮಾ ಜಿ, ಮತ್ತು ಇಲ್ಲಿ ನೆರೆದಿರುವ ಅತ್ಯಂತ ಆಸಕ್ತ ಹಾಗೂ ಗಣ್ಯ ಪ್ರೇಕ್ಷಕರೇ. ನನಗೆ ಈ ಅವಕಾಶವನ್ನು ನೀಡಿದ್ದಕ್ಕಾಗಿ ಧನ್ಯವಾದಗಳು. ನನಗೆ ತಿಳಿದಿರುವಂತೆ, ಈ ಎಲ್ಲವನ್ನೂ ಒಟ್ಟುಗೂಡಿಸಲು ವಿಕ್ರಮ್ ಅವರು ಕಳೆದ 12-13 ವರ್ಷಗಳಿಂದ ಅತ್ಯಂತ ಕಠಿಣವಾಗಿ ಮತ್ತು ಆಳವಾಗಿ ತೊಡಗಿಸಿಕೊಂಡು ಮಾಡಿರುವ ಸಂಘಟನಾತ್ಮಕ ಕೆಲಸವನ್ನು ನಾನು ಇಲ್ಲಿ ಕಾಣಬಲ್ಲೆ. ಮತ್ತು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ವಿಜೇತರಾದವರನ್ನು ನಾನು ಅಭಿನಂದಿಸಬಯಸುತ್ತೇನೆ.

ನನ್ನನ್ನು ಕೇಳುವುದಾದರೆ, ಈ ಪ್ರಯತ್ನವು ಸ್ವಲ್ಪ ತಡವಾಗಿಯೇ ಪ್ರಾರಂಭವಾಗಿದೆ. ವಿಕ್ರಮ್ ಅವರ ಪ್ರಯತ್ನಗಳನ್ನು ಕಡಿಮೆ ಅಂದಾಜಿಸಿ ಈ ಮಾತನ್ನು ಹೇಳುತ್ತಿರುವುದಲ್ಲ; ಕನಿಷ್ಠವೆಂದರೂ ನಾಲ್ಕು ಅಥವಾ ಐದು ದಶಕಗಳ ಹಿಂದೆಯೇ ಭಾರತಕ್ಕೆ ಇಂತಹ ಪ್ರಯತ್ನದ ಅಗತ್ಯವಿತ್ತು. ಆದರೆ ಇದರ ಬಗೆಗೆ ನಾವು ಗಮನ ಹರಿಸುವುದನ್ನೇ ಬಿಟ್ಟು ಬಿಟ್ಟಿದ್ದೇವೆ. ಕಳೆದ ನಾಲ್ಕೈದು ದಶಕಗಳ ಕಾಲ ಇಂತಹ ಪ್ರಯತ್ನ ಮಾಡದೇ ಇರುವುದು ವಾಸ್ತವದಲ್ಲಿ, ನಮ್ಮ ಇತಿಹಾಸವನ್ನು ಹಾಗೂ ನಮ್ಮ ಸಾಮಾಜಿಕ ಜೀವನವನ್ನು ಅತ್ಯಂತ ವಿಭಿನ ಹಾಗೂ ಅಸತ್ಯ ರೀತಿಯಲ್ಲಿ ಪ್ರಚಾರ ಮಾಡುವಲ್ಲಿ ನಮ್ಮ ವಿರೋಧಿಗಳು ಮತ್ತಷ್ಟು ಹೆಚ್ಚು ಶಕ್ತಿಶಾಲಿಯಾಗುವಂತೆ ಮಾಡಿದೆ. ನನ್ನ ಭಾಷಣದಲ್ಲಿ ಇದರ ಬಗೆಗೆ ಖಂಡಿತವಾಗಿಯೂ ಪ್ರಸ್ತಾಪ ಮಾಡುತ್ತೇನೆ.

ಇಂದು ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನ. ಸಹಜವಾಗಿ, ಭಾರತವು ಇದನ್ನು ಶಿಕ್ಷಕರ ದಿನವನ್ನಾಗಿ ಆಚರಿಸುತ್ತದೆ, ಆದರೆ ನಾವು ಗುರುಪೂರ್ಣಿಮೆಯನ್ನು ನಮ್ಮ ಶಿಕ್ಷಕರ ದಿನವನ್ನಾಗಿ ಆಚರಿಸುತ್ತೇವೆ. ರಾಧಾಕೃಷ್ಣನ್ ಅವರ ವಿದ್ವತ್ತು ಮತ್ತು ಭಾರತದ ವೈದಿಕ ಸಂಪ್ರದಾಯಗಳ ಬಗೆಗೆ ಅವರಿಗಿದ್ದ ವ್ಯಾಪಕ ಗೌರವದ ಕಾರಣದಿಂದ ಸೆಪ್ಟೆಂಬರ್ 5 ರಂದು ಅವರನ್ನು ಖಂಡಿತವಾಗಿಯೂ ಸ್ಮರಿಸಲಾಗುತ್ತದೆ. ಮತ್ತು ಭಾರತದ ಜಾತ್ಯತೀತ ಇತಿಹಾಸವು ಅದೇ 'ಶಿಕ್ಷಕರ ದಿನ' ಎಂದು ನಮಗೆ ಹೇಳುತ್ತದೆ ಕೂಡ. ಶಿಕ್ಷಕರನ್ನು ಎಷ್ಟು ದಿನಗಳಾದರೂ ಪೂಜಿಸಬಹುದು - ಅದು ಗುರುಪೂರ್ಣಿಮೆಯಿರಲಿ ಮತ್ತು ಸೆಪ್ಟೆಂಬರ್ 5 ಆಗಿರಲಿ. ಆದ್ದರಿಂದ ಈ ಬೆಳಿಗ್ಗೆ ನಿಮ್ಮ ಮುಂದೆ ನಿಂತು ನಮ್ಮ ಪೀಳಿಗೆಗೆ, ಮುಂಬರುವ ಪೀಳಿಗೆಗೆ, ಅದು ಜೆನ್ ಜಿ (Gen Z) ಇರಲಿ ಅಥವಾ ಜೆನ್ ಆಲ್ಫಾ (Gen Alpha) ಇರಲಿ, ಅತ್ಯಂತ ಮಹತ್ವದ್ದೆನಿಸಿರುವ ಹಲವು ವಿಭಿನ್ನ ವಿಷಯಗಳ ಬಗ್ಗೆ ಮಾತನಾಡುವುದು ನನಗೆ ಸಿಕ್ಕ ಗೌರವವಾಗಿದೆ.

ದೆಹಲಿಯಲ್ಲಿ, ವರ್ಷಧಾರೆಯಾಗುತ್ತಿರುವ ಈ ದಿನದಂದು ಈ ವಿಷಯದ ಬಗೆಗೆ ಚರ್ಚಿಸಲು ಇಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ವಿಕ್ರಮ್ ಅವರಿಗೆ ಮತ್ತೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ವಿಕ್ರಮ್ ಅವರು ಮಾಡಿದ ಎಲ್ಲಾ ಮಹತ್ತರವಾದ ಕೆಲಸಗಳನ್ನು ಕೇಳಲು ಇಲ್ಲಿ ಇನ್ನೂ ಹೆಚ್ಚಿನ ಜನರು ಇರುತ್ತಿದ್ದರು ಎಂಬ ಖಾತ್ರಿ ನನಗಿದೆ. ಆದರೆ ಚಿಂತಕರು ಮತ್ತು ಶಿಕ್ಷಕರು ಬೇರ್ಪಡಿಸಲಾಗದವರು, ಆದ್ದರಿಂದ ನಾವು ಇಬ್ಬರನ್ನೂ ಪೂಜಿಸುತ್ತೇವೆ. ಮತ್ತು ನಾನು ಡಾ. ಭೈರಪ್ಪ ಅವರ ಬಗ್ಗೆ ಮತ್ತು ಸ್ಮರಣಾರ್ಥ ಉಪನ್ಯಾಸದ ಬಗ್ಗೆ ಮಾತನಾಡುವ ಮುನ್ನ, ಇಂದಿನ ಪ್ರಶಸ್ತಿಗಳು ಮತ್ತು ಪ್ರಶಸ್ತಿಗಳಿಗೆ ಇಟ್ಟಿರುವ ಹೆಸರುಗಳ ಬಗ್ಗೆ ವಿಶೇಷವಾಗಿ ಉಲ್ಲೇಖ ಮಾಡಲೇಬೇಕಿದೆ. ಆರ್.ಸಿ. ಮಜುಂದಾರ್, ಎಸ್.ಎಲ್. ಭೈರಪ್ಪ ಅಥವಾ ಅನಂತ್ ಪೈ, ಇವರು ನಮ್ಮ ಚೈತನ್ಯವನ್ನು ಜೀವಂತವಾಗಿಟ್ಟ ಮೂವರು ಶ್ರೇಷ್ಠ ಮಹನೀಯರು.

ನಮ್ಮ ಇತಿಹಾಸ ಪುಸ್ತಕಗಳಲ್ಲಿ ಏನು ಸೇರಬೇಕು, ನಮ್ಮ ಪತ್ರಿಕೆಗಳಲ್ಲಿ ಏನು ಬರಬೇಕು, ನಮ್ಮ ಸಾಂಸ್ಕೃತಿಕ ಅಕಾಡೆಮಿಗಳಲ್ಲಿ ಏನು ಇರಬೇಕು ಎಂಬುದೆಲ್ಲವನ್ನೂ ನಿರ್ಧರಿಸಿದ ಭಾರತದ ಸಾಮಾಜಿಕ- ಐತಿಹಾಸಿಕ ಜನರು ಹಾಗೂ ಭಾರತದ ಗಣ್ಯರು, ಎಂತಹ ದಿಗ್ಗಜರನ್ನು ಗಮನಿಸದೆ ಬಿಟ್ಟಿದ್ದಾರೆ ಎಂಬುದನ್ನು ಈ ಪ್ರಶಸ್ತಿಗಳಿಗಿಟ್ಟಿರುವ ಹೆಸರೇ ತಿಳಿಸುತ್ತದೆ. ಆದ್ದರಿಂದ ವಿಕ್ರಮ್, ಈ ಹೆಸರುಗಳ ಆಯ್ಕೆಯೇ ಅತ್ಯಂತ ಶ್ಲಾಘನೀಯ ಮತ್ತು ಪ್ರಶಂಸನೀಯ ಪ್ರಯತ್ನವಾಗಿದೆ. ತಮ್ಮ ಸಿದ್ಧಾಂತವನ್ನು ಅನುಸರಿಸುವ ಜನರಿಗೆ ದಿನೇದಿನೇ ಕಷ್ಟಕರವಾಗುತ್ತಲೇ ಇದ್ದ ಭಾರತದಲ್ಲಿ, ನಮಗೆ ನಡೆಯಲು ದಾರಿ ತೋರಿಸಿದ ಕಾದಂಬರಿಕಾರರಾಗಿ ಅಥವಾ ಒಬ್ಬ ಮಾರ್ಗದರ್ಶಿ ವ್ಯಕ್ತಿಯಾಗಿ ಭಾರತವು ಇಂದು ಎಸ್.ಎಲ್. ಭೈರಪ್ಪ ಅವರನ್ನು ನೋಡುತ್ತಿರುವುದು ಅತ್ಯಂತ ಅರ್ಥಪೂರ್ಣವಾಗಿದೆ.

ಅವರ ಪಿಎಚ್.ಡಿ ಪ್ರಬಂಧವು ಅವರ ಇಡೀ ನಿಯತಿಯನ್ನೇ ವ್ಯಾಖ್ಯಾನಿಸುವಂತೆ 'ಸತ್ಯ ಮತ್ತು ಸೌಂದರ್ಯ' ಎಂಬ ಶೀರ್ಷಿಕೆಯನ್ನು ಹೊಂದಿತ್ತು. ಇದನ್ನು ಅವರು 1966 ರಲ್ಲಿ ಬರೋಡಾದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದರು. ಅವರ ಈ ವಿದ್ವತ್ತಿನ ಪಯಣವು ಅತ್ಯಂತ ಕಠಿಣವಾಗಿತ್ತು. ತಮ್ಮ ಆತ್ಮಕಥೆ 'ಭಿತ್ತಿ'ಯಲ್ಲಿ, ಭೈರಪ್ಪ ಅವರು ತೀವ್ರ ಬಡತನ, ತಾಯಿಯ ಅಕಾಲಿಕ ಮರಣ ಮತ್ತು ಅತಂತ್ರ ಸ್ಥಿತಿಯಲ್ಲಿದ್ದ ಮನೆ, ಪ್ಲೇಗ್ ಸಾಂಕ್ರಾಮಿಕ ರೋಗದ ಸಮಯದಲ್ಲಿ ಒಡಹುಟ್ಟಿದವರು ಮತ್ತು ಸಂಬಂಧಿಕರನ್ನು ಕಳೆದುಕೊಂಡ ಬಾಲ್ಯವನ್ನು ನೆನಪಿಸಿಕೊಳ್ಳುತ್ತಾರೆ. ಅದು ಅತ್ಯಂತ ಕಷ್ಟಮಯ ಜೀವನವಾಗಿದ್ದಿರಬಹುದು ಹಾಗೂ ಅದನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.

ಹೀಗಾಗಿ ರಾಜ್ಯದ ವಿವಿಧ ಭಾಗಗಳಲ್ಲಿದ್ದ ಸಂಬಂಧಿಕರು ಬೇರೆ ಬೇರೆ ಅವಧಿಗಳಲ್ಲಿ ಅವರನ್ನು ಬೆಳೆಸಿದರು. ಅವರು ಕಷ್ಟಗಳ ನಡುವೆಯೇ ತಮ್ಮ ಶಿಕ್ಷಣವನ್ನು ಮುಂದುವರಿಸಿದರು. ಕಷ್ಟಗಳನ್ನೇ ಅವರು ಜೀವಿಸಿದರು. ಅವರ ಅನುಭವಕ್ಕೆ ಬಂದ ಈ ವಾಸ್ತವಗಳು ಅವರ ಬರವಣಿಗೆಗೆ ಪ್ರಬುದ್ಧತೆಯನ್ನು ನೀಡಿದವು. ಅವರಲ್ಲಿ ಯಾವುದೇ ಕಹಿ ಇರಲಿಲ್ಲ. ಸಂಯಮ ಮತ್ತು ಭಾವನಾತಿರೇಕವಿಲ್ಲದ ವಾಸ್ತವಿಕತೆ ಅವರ ಬರವಣಿಗೆಯ ಗುಣಲಕ್ಷಣಗಳಾಗಿದ್ದವು. ಅಸಾಧಾರಣವಾದ ಕಠಿಣ ಸಿದ್ಧತೆಯು ಆ ಅನುಭವೀ ಜೀವನಕ್ಕೆ ಸಾಥ್ ನೀಡಿತು. ಯಾವುದೇ ಪ್ರಪಂಚದೊಳಗೆ ಪ್ರವೇಶಿಸಲು ಪ್ರಯತ್ನಿಸದ ಹೊರತು ಭೈರಪ್ಪ ಅದರ ಬಗೆಗೆ ಬರೆಯುತ್ತಿರಲಿಲ್ಲ. ಶಾಸ್ತ್ರೀಯ ಸಂಗೀತ ಹಾಗೂ ಆ ಕಲಾವಿದರ ಕುರಿತ ಅವರ ಪ್ರಮುಖ ಕಾದಂಬರಿ 'ಮಂದ್ರ' ಬರೆಯುವ ಮೊದಲು- ಮತ್ತು ಇಲ್ಲಿ ವಿಕ್ರಮ್ ಕೂಡ ಸಂಗೀತ ಮತ್ತು ಸಂಗೀತಗಾರರ ಬಗ್ಗೆ ಕೆಲಸ ಮಾಡುತ್ತಿದ್ದಾರೆ - ಅವರು ಸ್ವತಃ ಶಾಸ್ತ್ರೀಯ ಸಂಗೀತವನ್ನು ಕಲಿತರು ಮತ್ತು ಗಾಯಕರೊಂದಿಗೆ ದೀರ್ಘಕಾಲ ಕಳೆದರು.

ಅವರು ಅದರ ಬಗ್ಗೆ ಬರೆಯುವ ಮೊದಲು ಆ ಅನುಭವವನ್ನು ಸ್ವತಃ ಜೀವಿಸಲು ಬಯಸಿದ್ದರು. ಅದಕ್ಕಾಗಿಯೇ ಅವರು ಆ ವಿಷಯದ ಬಗ್ಗೆ ಬರೆದಾಗ, ಅದರಲ್ಲಿ ಅಷ್ಟೊಂದು ನೈಜತೆ, ಅಪ್ಪಟತನ ಇತ್ತು ಮತ್ತು ಅವರು ಬರೆದ ಪ್ರತಿಯೊಂದು ಪದದಲ್ಲೂ ನೀವು ಅದನ್ನು ನೇರವಾಗಿ ಅನುಭವಿಸಬಹುದಿತ್ತು. ಹೀಗಾಗಿ ಗಾಯಕರೊಂದಿಗೆ ಅವರು ದೀರ್ಘ ಸಮಯ ಕಳೆದರು. ಆ ಪ್ರಪಂಚದ ಹಿಂದಿರುವ ಕಲೆ, ಜೀವನ, ಮಹತ್ವಾಕಾಂಕ್ಷೆ, ಶಿಸ್ತು, ಅಭದ್ರತೆ ಮತ್ತು ಆ ಪ್ರಪಂಚದೊಳಗಿನ ಸಂಕೀರ್ಣ ಸಂಬಂಧಗಳನ್ನು ಅವರು ಅರ್ಥಮಾಡಿಕೊಳ್ಳಲು ಬಯಸಿದ್ದರು. ತಮ್ಮ ಮತ್ತೊಂದು ಶ್ರೇಷ್ಠ ಕೃತಿಯಾದ 'ಪರ್ವ' ಬರೆಯುವುದಕ್ಕಾಗಿ, ಅವರು ಕುರುಕ್ಷೇತ್ರ, ಹಸ್ತಿನಾಪುರ ಸೇರಿದಂತೆ ಮಹಾಭಾರತಕ್ಕೆ ಸಂಬಂಧಿಸಿದ ಸ್ಥಳಗಳಿಗೆ ಪ್ರಯಾಣಿಸಿದರು. ಸಹೋದರ ಬಹುಪತ್ನಿತ್ವದ ಪದ್ಧತಿಗಳು ಇತ್ತೀಚಿನವರೆಗೂ ಉಳಿದುಕೊಂಡಿದ್ದ, ಹಿಮಾಲಯ ಪ್ರದೇಶದ ಸಮುದಾಯಗಳ ಬಗ್ಗೆಯೂ ಅವರು ಅಧ್ಯಯನ ಮಾಡಿದರು.

ಅವರು ಮಹಾಭಾರತವನ್ನು ಹಾಗೆಯೇ ಬರೆಯಬಹುದಿತ್ತು, ಎಲ್ಲಾ ದ್ವಿತೀಯ ಮೂಲಗಳನ್ನು ನೋಡಬಹುದಿತ್ತು, ಈಗಾಗಲೇ ಭಾರತದ ಹಲವು ವಿಭಿನ್ನ ಭಾಷೆಗಳಲ್ಲಿ ಬರೆಯಲಾದ ವಿವಿಧ ಮಹಾಭಾರತಗಳನ್ನು ವಿಶ್ಲೇಷಿಸಬಹುದಿತ್ತು. ಆದರೆ ಇಲ್ಲ, ಅವರು ಆ ಸ್ಥಳಗಳಿಗೆ ಹೋದರು. ಅವರು ಆ ಜನರೊಟ್ಟಿಗೆ ಇದ್ದು ಅನುಭವ ಪಡೆಯಲು ಬಯಸಿದ್ದರು. ತನ್ನ ಓದುಗರೊಂದಿಗೆ ಪ್ರಾಮಾಣಿಕವಾಗಿ ಸಂವಹನ ನಡೆಸಲು ಬಯಸುವ ಲೇಖಕನು ಪಡುವ ಶ್ರಮ, ಅವನು ಅನುಭವಿಸುವ ಕಷ್ಟಗಳು, ವಾಸ್ತವವಾಗಿ ಆ ಪುಸ್ತಕವು ಹೇಳುವುದಕ್ಕಿಂತಲೂ ಹೆಚ್ಚಾಗಿ ಸ್ವತಃ ಆ ಲೇಖಕನ ಬಗ್ಗೆ ನಮಗೆ ತಿಳಿಸುತ್ತದೆ. ಭೈರಪ್ಪ ಅವರು ಅಂತಹ ಗುಣವನ್ನು ಹೊಂದಿದ್ದರು. ಇದು ಅಂತಹ ಕುಟುಂಬಗಳು ಮತ್ತು ಅಂತಹ ಕೌಟುಂಬಿಕ ರಚನೆಗಳು ಪ್ರೀತಿ, ಕರ್ತವ್ಯ, ಅಸೂಯೆ ಮತ್ತು ಆತ್ಮೀಯತೆಯನ್ನು ಹೇಗೆ ಮತ್ತು ಎಷ್ಟರ ಮಟ್ಟಿಗೆ ರೂಪಿಸುತ್ತವೆ ಎಂದು ಕೇಳಲು ಅವರಿಗೆ ಅನುವು ಮಾಡಿಕೊಟ್ಟಿತು.

ಆದ್ದರಿಂದ ಅವರು ಮೊದಲು ಆ ಪ್ರಪಂಚವನ್ನು ಪ್ರವೇಶಿಸಿದರು, ಮತ್ತು ನಂತರವಷ್ಟೇ ಅದನ್ನು ನಮಗಾಗಿ ಮರುಸೃಷ್ಟಿಸಿದರು. ಈ ತಾದಾತ್ಮ್ಯತೆಯು ಅವರ ಕೃತಿಯ ಅತ್ಯಂತ ದೊಡ್ಡ ಶಕ್ತಿಗಳಲ್ಲೊಂದಾದ ಮಾನವ ಸಂಬಂಧಗಳನ್ನು ಚಿತ್ರಿಸುವ ಸೂಕ್ಷ್ಮತೆಯನ್ನು ವಿವರಿಸುತ್ತದೆ. ಅವರ ಪಾತ್ರಗಳು ಎಂದಿಗೂ ಸೈದ್ಧಾಂತಿಕ ಚೌಕಟ್ಟಿಗೆ ಸೀಮಿತವಾಗಿರುವುದಿಲ್ಲ. ಒತ್ತಡದ ಸಂದರ್ಭದಲ್ಲಿ ಜನರು ಹೇಗೆ ಪ್ರತಿಕ್ರಿಯಿಸುತ್ತಾರೆ, ಕರ್ತವ್ಯ ಮತ್ತು ಆಸೆಗಳು ಹೇಗೆ ಪರಸ್ಪರ ಸಂಘರ್ಷಕ್ಕೊಳಗಾಗುತ್ತವೆ ಮತ್ತು ಭಾವನೆಯಲ್ಲಾಗುವ ಸಣ್ಣ ಮಾರ್ಪಾಡು ಇಡೀ ಸಂಬಂಧವನ್ನು ಹೇಗೆ ಬದಲಾಯಿಸಬಹುದು ಎಂಬುದನ್ನು ನಾವು ನೋಡುತ್ತೇವೆ. ಓದುಗನು ಕೇವಲ ಕಥೆಯನ್ನು ಅನುಸರಿಸುವುದಿಲ್ಲ; ಓದುಗನು ಅದರೊಳಗೆ ತನ್ನ ಇರುವಿಕೆಯನ್ನು ಅನುಭವಿಸುತ್ತಾನೆ. ಈ ವಿಧಾನದ ಹಿಂದೆ ಸಾಹಿತ್ಯದ ಸ್ಪಷ್ಟ ತತ್ವಶಾಸ್ತ್ರವಿತ್ತು. 'ನಾನೇಕೆ ಬರೆಯುತ್ತೇನೆ?' ಎಂಬ ತಮ್ಮ ಕೃತಿಯಲ್ಲಿ ಸಾಹಿತ್ಯವು ಎಡಪಂಥೀಯ, ಬಲಪಂಥೀಯ ಅಥವಾ ಯಾವುದೇ ಇತರ 'ವಾದ'ಗಳ (ism) ಸಾಧನವಾಗಬೇಕು ಅಥವಾ ಸಾಮಾಜಿಕ ಪ್ರಗತಿಯ ನಿಗದಿತ ಕಾರ್ಯಕ್ರಮದ ವಾಹಕವಾಗಬೇಕು ಎಂಬ ಕಲ್ಪನೆಯನ್ನು ಭೈರಪ್ಪ ಅವರು ತಿರಸ್ಕರಿಸಿದರು.

ಆದ್ದರಿಂದ ಭರತನ ನಾಟ್ಯಶಾಸ್ತ್ರವನ್ನು ಆಧರಿಸಿ, ಸಾಹಿತ್ಯವು ಓದುಗನನ್ನು ರಸದಲ್ಲಿ ಮುಳುಗಿಸಬೇಕು ಎಂದು ಅವರು ವಾದಿಸಿದರು: ಅದ್ಭುತ, ಕರುಣ, ವೀರ, ಶೃಂಗಾರ ಮತ್ತು ಮಾನವ ಭಾವನೆಗಳ ಸಂಪೂರ್ಣ ಶ್ರೇಣಿ - ನಾವು ಇದನ್ನು ನವರಸಗಳು ಎಂದು ಕರೆಯುತ್ತೇವೆ. ಇದರ ಕೆಲಸವು ಅನುಭವವನ್ನು ಆಳಗೊಳಿಸುವುದು ಮತ್ತು ಸಂವೇದನೆಯನ್ನು ಪರಿಷ್ಕರಿಸುವುದೇ ಹೊರತು ರಾಜಕೀಯ ತೀರ್ಮಾನವನ್ನು ಹೇರುವುದಲ್ಲ. ಅದಕ್ಕಾಗಿಯೇ ಅವರ ಕಾದಂಬರಿಗಳು ಕೃತಕವಾಗಿ ಸೃಷ್ಟಿಸಿದಂತೆ ಅನಿಸದೆ, ಸ್ವತಃ ಅನುಭವಿಸಿದಂತೆ ಭಾಸವಾಗುತ್ತವೆ. ಡಾ. ಭೈರಪ್ಪ ಅವರು ಮೊದಲ ಬಾರಿಗೆ ನನ್ನ ತಿಳುವಳಿಕೆಯ ಪರಿಧಿಯನ್ನು ಹೇಗೆ ಪ್ರವೇಶಿಸಿದರು ಎಂಬುದರ ಕುರಿತು ನಾನು ನಿಮ್ಮೊಡನೆ ಹಂಚಿಕೊಳ್ಳಲು ಬಯಸುತ್ತೇನೆ. ದಶಕಗಳ ಹಿಂದೆ, ನಾನು 'ವಂಶವೃಕ್ಷ' ನಾಟಕವನ್ನು ನೋಡಿದ್ದೆ - ಅತ್ಯಂತ ಹವ್ಯಾಸಿ ತಂಡವೊಂದು ಅದರ ಪ್ರದರ್ಶನ ನೀಡಿತ್ತು. ಆ ಪಾತ್ರಗಳು ಸಂಪ್ರದಾಯ ಮತ್ತು ಕರ್ತವ್ಯದೊಂದಿಗೆ ಹೋರಾಡುವುದನ್ನು ಪ್ರೇಕ್ಷಕರ ಮಧ್ಯೆ ಕುಳಿತು ನೋಡಿದ ನನ್ನ ಮನಸ್ಸಿನಲ್ಲಿ, ಆ ಪ್ರದರ್ಶನದ ತೀವ್ರತೆಯು ಉಳಿದುಹೋಯಿತು. ಇದಾಗಿದ್ದು, ತಮಿಳುನಾಡಿನ ತಿರುಚಿಯಲ್ಲಿ.

ನಾನು ಇದನ್ನು ಪ್ರಸ್ತಾಪಿಸುತ್ತಿರುವುದಕ್ಕೆ ಕಾರಣವೆಂದರೆ, ರಂಗಭೂಮಿ ಎಂಬುದು ಕೇವಲ ನನ್ನ ನೆನಪಿನಲ್ಲಿರುವ ಒಂದು ಹಿನ್ನೆಲೆಯಲ್ಲ; ಅದು, ಇಂದು ನಾನು ನಿಮ್ಮ ಮುಂದೆ ಇಡಲು ಬಯಸುವ ವಿಷಯದ ಪ್ರಮುಖ ರೂಪಕವಾಗಿದೆ. ನಾವು ಡಾ. ಭೈರಪ್ಪ ಅವರ ಸಾಹಿತ್ಯಿಕ ಪಯಣವನ್ನು ನೋಡಿದಾಗ, ಅವರು ಸುಮಾರು 15 ವರ್ಷಗಳ ಅಂತರದಲ್ಲಿ ಎರಡು ವಿಭಿನ್ನ ಶಿಖರ ಸ್ಥಿತಿಗಳನ್ನು ಅನುಭವಿಸಿದರು. ಮೊದಲನೆಯದು 1965 ಮತ್ತು 1979 ರ ನಡುವಿನ ಕಲಾತ್ಮಕ ಶಿಖರ - ಇದು 'ವಂಶವೃಕ್ಷ', 'ಗೃಹಭಂಗ' ಮತ್ತು ಅವರಿಗೆ 1975 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ತಂದುಕೊಟ್ಟ 'ದಾಟು', ಮತ್ತು ಅಂತಿಮವಾಗಿ 'ಪರ್ವ'ದಂತಹ ಶ್ರೇಷ್ಠ ಕೃತಿಗಳ ಯುಗವಾಗಿತ್ತು. ಎರಡನೆಯದು ಸುಮಾರು 2007 ರಿಂದ ಪ್ರಾರಂಭವಾದ ಅಭೂತಪೂರ್ವ ಸಾರ್ವಜನಿಕ ಸ್ಪಂದನೆಯ ಶಿಖರವಾಗಿದೆ. ಆ ಸಮಯದಲ್ಲಿ 'ಆವರಣ' ಕಾದಂಬರಿಯು ಪ್ರಕಟಣೆಗೆ ಮುಂಚಿತವಾಗಿಯೇ ಸಂಪೂರ್ಣವಾಗಿ ಮಾರಾಟವಾಯಿತು ಮತ್ತು ಕೇವಲ ಐದು ತಿಂಗಳಲ್ಲಿ 10 ಮರುಮುದ್ರಣಗಳನ್ನು ಕಂಡಿತು – ಇದು ಇಡೀ ಭಾರತೀಯ ಪ್ರಕಾಶನ ರಂಗದಲ್ಲಿಯೇ ಒಂದು ದಾಖಲೆಯಾಗಿದೆ - ಇತ್ತ 'ಪರ್ವ' ಕೃತಿಯು 19 ಆವೃತ್ತಿಗಳನ್ನು ತಲುಪಿದೆ.

ಅವರ ಆರು ಕಾದಂಬರಿಗಳನ್ನು ಭಾರತೀಯ ಚಿತ್ರರಂಗದ ಪ್ರಮುಖ ನಿರ್ದೇಶಕರು ಚಲನಚಿತ್ರಗಳಾಗಿಸಿದರು. 'ವಂಶವೃಕ್ಷ' ಚಿತ್ರವು 1971 ರಲ್ಲಿ ಗಿರೀಶ್ ಕಾರ್ನಾಡ್ ಅವರಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ತಂದುಕೊಟ್ಟರೆ, ಗಿರೀಶ್ ಕಾಸರವಳ್ಳಿ ಅವರು 'ನಾಯಿ ನೆರಳು' ಕಾದಂಬರಿಯನ್ನು ಬೆಳ್ಳಿತೆರೆಗೆ ತಂದರು. ಆದರೂ ಇಲ್ಲೊಂದು ಗಮನಾರ್ಹ ವಿರೋಧಾಭಾಸವಿದೆ. ಭೈರಪ್ಪ ಅವರ ಕೃತಿಗಳನ್ನು ಚಲನಚಿತ್ರಗಳಾಗಿಸಿ, ಅದಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದ ಅದೇ ದಿಗ್ಗಜರು, ನಂತರದ ದಿನಗಳಲ್ಲಿ ಅವರನ್ನು ತೀವ್ರವಾಗಿ ಟೀಕಿಸಿ, ಹಗೆತನ ಸಾಧಿಸಿದವರಲ್ಲಿ ಪ್ರಮುಖರಾಗಿದ್ದರು. ಅವರ ಪ್ರಾಮಾಣಿಕತೆಯೇ ಅವರನ್ನು ಒಂದು ಚೌಕಟ್ಟಿಗೆ ಸೀಮಿತಗೊಳಿಸಿತು. ಅವರನ್ನು ಈ ರೀತಿ ಒಂದು ಚೌಕಟ್ಟಿಗೆ ಸೀಮಿತಗೊಳಿಸಿದ್ದಾದರೂ ಏಕೆ? ಇದಕ್ಕೂ ಅವರ ಸಾಹಿತ್ಯಿಕ ಕಲೆಗೂ ಯಾವುದೇ ಸಂಬಂಧವಿರಲಿಲ್ಲ; ಬದಲಿಗೆ ಟಿಪ್ಪು ಸುಲ್ತಾನ್‌ನಂತಹ ಸಂಕೀರ್ಣ ಐತಿಹಾಸಿಕ ವ್ಯಕ್ತಿಗಳ ಕುರಿತ ಅವರ ಅಚಲವಾದ ಆಲೋಚನಾ ಪ್ರಾಮಾಣಿಕತೆ ಮತ್ತು ಅಭಿವ್ಯಕ್ತಿಯೇ ಇದಕ್ಕೆ ಕಾರಣವಾಗಿತ್ತು.

ಐತಿಹಾಸಿಕ ದಾಖಲೆಗಳ ಸಂಶೋಧನೆಯಿಂದ ದೊರೆತ ಮಾಹಿತಿಯನ್ನು ಸಮಕಾಲೀನ ರಾಜಕೀಯಕ್ಕೆ ಅನುಕೂಲವಾಗುವಂತೆ ಮೃದುಮಧುರವಾಗಿ ಹೇಳಲು ಅವರು ನಿರಾಕರಿಸಿದರು. ತಮ್ಮ 91 ನೇ ವಯಸ್ಸಿನಲ್ಲಿಯೂ ಅವರು "ಟಿಪ್ಪು ಮೂಲತಃ ಕ್ರೂರಿ" ಎಂದೇ ಸ್ಪಷ್ಟವಾಗಿ ಹೇಳಿದರು. "ಸ್ವಭಾವತಃ ಟಿಪ್ಪು ಕ್ರೂರಿಯೇ ಆದರೆ ಟಿಪ್ಪುವನ್ನು ಹೀರೋ ಮಾಡಿಕೊಂಡು ಬರೆಯುತ್ತಾರೆ" ಅಂದರೆ,ಅವರು ಟಿಪ್ಪುವನ್ನು ನಾಯಕನನ್ನಾಗಿ ಬಿಂಬಿಸುತ್ತಲೇ ಇರುತ್ತಾರೆ ಎಂದು ತಾವು ಗಮನಿಸಿದ್ದನ್ನು ಖಡಾಖಂಡಿತವಾಗಿ ಹೇಳಿದರು. ಇಂತಹ ಬೌದ್ಧಿಕ ಋಜುತ್ವ, ಐತಿಹಾಸಿಕ ದಾಖಲೆಗಳಿಂದ ತಮಗೆ ತಿಳಿದುಬಂದದ್ದನ್ನು ಪ್ರಾಮಾಣಿಕವಾಗಿ ಹೇಳುವುದು ಮತ್ತು ಅದನ್ನು ಮುಕ್ತವಾಗಿ ವ್ಯಕ್ತಪಡಿಸುವ ನ್ಯಾಯಪರತೆಯೇ ಅವರು ಒಂದು ಚೌಕಟ್ಟಿಗೆ ಸೀಮಿತಗೊಳ್ಳುವಂತೆ ಮಾಡಿತು.

ಪ್ರತಿಯೊಬ್ಬರಿಗೂ ಅವರನ್ನು ಹೀಗೆ ವರ್ಗೀಕರಿಸುವುದು ಅನುಕೂಲಕರವಾಗಿತ್ತು. "ಓಹ್, ಅವರು ಬೇರೆಯದೇ ಇತಿಹಾಸವನ್ನು ತರಲು ಬಯಸುವ ಜನರ ವರ್ಗಕ್ಕೆ ಸೇರಿದವರು, ಆದರೆ ನಾವು ನಿಮಗೆ ನೀಡಲು ಬಯಸುವ ಇತಿಹಾಸ ಮಾತ್ರ ಇದುವೇ. ಇದನ್ನು ಒಪ್ಪಿಕೊಳ್ಳಿ, ಸ್ವೀಕರಿಸಿ ಅಥವಾ ಬಿಟ್ಟುಬಿಡಿ. ಆದರೆ, ನಾವು ಆ ಮತ್ತೊಂದು ಇತಿಹಾಸಕ್ಕೆ ಅವಕಾಶ ನೀಡುವುದಿಲ್ಲ," ಎಂದೇನೋ ಅವರೆಲ್ಲ ಹೇಳಿದರು. ಆದರೆ, ಆ ಮತ್ತೊಂದು ಇತಿಹಾಸವು ಕೇವಲ 'ಮತ್ತೊಂದು' ಇತಿಹಾಸವಾಗಿರಲಿಲ್ಲ - ಅದುವೇ ವಾಸ್ತವವಾಗಿತ್ತು. ನಾನೀಗ ಹೇಳಲಿರುವ ಮಾತುಗಳು ಭೈರಪ್ಪನವರದೇ ಹೊರತು, ನನ್ನದಲ್ಲ. ಅವರಿದನ್ನು 2022 ರ ನವೆಂಬರ್ 14 ರಂದು ಮೈಸೂರಿನಲ್ಲಿ ಹೇಳಿದ್ದರು ಹಾಗೂ ಈ ವಿವರಗಳು ಖಂಡಿತವಾಗಿಯೂ ನಿಮಗೆ ಸಿಗುತ್ತವೆ ಎಂಬುದು ನನ್ನ ನಂಬಿಕೆ. ಇದನ್ನು ಅವರು 'ಟಿಪ್ಪು ನಿಜ ಕನಸುಗಳು' ನಾಟಕದ ಬಿಡುಗಡೆಯ ಸಂದರ್ಭದಲ್ಲಿ ಹೇಳಿದ್ದರು. ಮೂಲಭೂತವಾಗಿ ಐತಿಹಾಸಿಕ ದಾಖಲೆಗಳ ಸಂಶೋಧನೆಯನ್ನಾಧರಿಸಿ ನೀಡಲಾಗಿದ್ದ ಹೇಳಿಕೆಯನ್ನು ರಾಜಕೀಯ ಕಟುತ್ವ ಎಂದು ದಾಳಿ ಮಾಡಲಾಯಿತು. ಹಾಗಿದ್ದರೂ ಕೂಡ ಅವರು ತಮ್ಮ ಕಲಾಭಿವ್ಯಕ್ತಿಯ ಪರಿಧಿಯ ಬಗೆಗೆ ಸ್ಪಷ್ಟತೆ ಹೊಂದಿದ್ದರು.

"ಬರೆಯುವುದು ನನ್ನ ಮಾಧ್ಯಮ, ನಾನು ಬರೆಯುತ್ತೇನೆ, ಬೆಂಕಿ ಹಾಕುವುದಿಲ್ಲ" ಎಂದು ಅವರು 2018 ರ ಜನವರಿ 19 ರಂದು ನಡೆದ ನೃಪತುಂಗ ಪ್ರಶಸ್ತಿ ಪ್ರದಾನ ಸಮಾರಂಭದ ಭಾಷಣದಲ್ಲಿ ಹೇಳಿದ್ದರು. ಹೀಗಾಗಿ ಡಾ. ಭೈರಪ್ಪ ಅವರನ್ನು ಯಾವುದೇ ರೀತಿಯಲ್ಲೂ ಮೌನಕ್ಕೆ ಶರಣಾಗುವಂತೆ ತುಳಿಯಲು ಸಾಧ್ಯವಾಗಲೇ ಇಲ್ಲ; ಆದರೆ ಸಾಂಸ್ಥಿಕ ಶ್ರೇಯಾಂಕದ ಮಟ್ಟದಲ್ಲಿ 'ಗೇಟ್ ಕೀಪಿಂಗ್' ಮಾಡಲಾಯಿತು. ಕರ್ನಾಟಕದಲ್ಲಿ ನವ್ಯ ಚಳವಳಿಯ ಪ್ರವರ್ತಕರಾಗಿದ್ದ ಯು.ಆರ್. ಅನಂತಮೂರ್ತಿ ಅವರು ಭೈರಪ್ಪ ಅವರನ್ನು ಕಾದಂಬರಿಕಾರರಿಗಿಂತ ಹೆಚ್ಚಾಗಿ ಒಬ್ಬ ಚರ್ಚಾವಾದಿ ಎಂದು ತಳ್ಳಿಹಾಕಿದರು. ಮತ್ತು ಇದು 2007 ರ ಮೇ ತಿಂಗಳ ಆಸುಪಾಸಿನಲ್ಲಿ ನಡೆದ ಘಟನೆ. ಭೈರಪ್ಪನವರಿಗೆ ಕೇವಲ ವಾದ ಮಾಡಲು ಮಾತ್ರ ತಿಳಿದಿದೆಯಷ್ಟೇ, ಆದರೆ ಕಾದಂಬರಿಕಾರರಾಗಿ ಬರೆಯಲು ಬರುವುದಿಲ್ಲ ಎಂದು ಹೇಳುವ ಮೂಲಕ ಅನಂತಮೂರ್ತಿಯವರು ಭೈರಪ್ಪನವರನ್ನು ಕೀಳಾಗಿ ಕಾಣಲು ಪ್ರಯತ್ನಿಸಿದರು.

ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಚಂದ್ರಶೇಖರ ಪಾಟೀಲರು 'ಆವರಣ' ಕಾದಂಬರಿಯನ್ನು ಅತ್ಯಂತ ಅವಹೇಳನಕಾರಿ ರೀತಿಯಲ್ಲಿ ಟೀಕಿಸಿದರು. ಓದುಗ ವರ್ಗವು ಭೈರಪ್ಪನವರನ್ನು ಸಂಭ್ರಮದಿಂದ ಕಂಡಿತು, ಪ್ರಖ್ಯಾತರನ್ನಾಗಿಸಿತು. ಆದರೆ ಸಾಂಸ್ಥಿಕ ಮಟ್ಟದಲ್ಲಿದ್ದ ಗೇಟ್‌ಕೀಪರ್‌ಗಳು ಹಾಗೆ ಮಾಡಲಿಲ್ಲ.ಆಳವಾಗಿ ಬೇರೂರಿದ್ದ ವ್ಯವಸ್ಥೆಯು ತನ್ನದೇ ಅಭಿಷಿಕ್ತ ಗಣ್ಯರೊಂದಿಗೆ ಭೈರಪ್ಪನವರನ್ನು ಸರಿಸಮಾನವಾಗಿ ಪರಿಗಣಿಸಲು ನಿರಾಕರಿಸಿತು. ಅವರ ಬಗೆಗೆ ಅತ್ಯಂತ ಕಟುವಾಗಿ ಟೀಕೆ ಮಾಡಿದ ವಿಮರ್ಶಕರು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದರು; ಆದರೆ ಭೈರಪ್ಪನವರಿಗೆ ಅದು ಎಂದಿಗೂ ಲಭಿಸಲಿಲ್ಲ. ಇದು ನಮ್ಮ ರಾಷ್ಟ್ರೀಯ ಮತ್ತು ಬೌದ್ಧಿಕ ಸಂವಾದದ ಜ್ಞಾನಭಂಡಾರದ ಮೂಲಭೂತ ವಿರೂಪತೆಯತ್ತ ನಮ್ಮನ್ನು ನೇರವಾಗಿ ಕರೆದೊಯ್ಯುತ್ತದೆ. ಸಾಂಪ್ರದಾಯಿಕ ರಾಜಕೀಯ ಪದಸಂಪತ್ತನ್ನು ಬಳಸಿಕೊಂಡು ನಾವು ವಿವಿಧ ಛಾಯೆಗಳ ಬಗ್ಗೆ ಸುಲಭವಾಗಿ ಮಾತನಾಡುತ್ತೇವೆ. ಸಂಪ್ರದಾಯವಾದಿ ಉದಾರವಾದಿ, ಉದಾರವಾದಿ ಉದಾರವಾದಿ ಮತ್ತು ತೀವ್ರಗಾಮಿ ಉದಾರವಾದಿ ಎಂಬ ಪದಗಳನ್ನು ನಾವು ಕೇಳುತ್ತೇವೆ. ಜನರನ್ನು ಒಂದು ಚೌಕಟ್ಟಿಗೆ ಸೀಮಿತಗೊಳಿಸಲು ಇಂತಹ ಬಿರುದುಗಳನ್ನು ನೀಡಲಾಗುತ್ತದೆ.

ಆದರೂ ಆಧುನಿಕ ಭಾರತದಲ್ಲಿ, ಮಾನದಂಡವನ್ನು ಹೇಗೆ ಪಕ್ಷಪಾತೀಯವಾಗಿ ರೂಪಿಸಲಾಗಿದೆ ಎಂಬುದನ್ನು ನೋಡಿ: ದಾಖಲಿತ ಐತಿಹಾಸಿಕ ಸತ್ಯಗಳನ್ನು ಪ್ರಸ್ತುತಪಡಿಸುವ ಭಾರತೀಯ ಸಂಪ್ರದಾಯವಾದಿ ಉದಾರವಾದಿಯನ್ನು ತಕ್ಷಣವೇ ತೀವ್ರ ಬಲಪಂಥೀಯ ಎಂದು ಕರೆಯಲಾಗುತ್ತದೆ. ಈ ತೀವ್ರಗಾಮಿ ಎಂಬ ಹಣೆಪಟ್ಟಿಯನ್ನು ಎಂದಿಗೂ ವಿರುದ್ಧ ದಿಕ್ಕಿನಲ್ಲಿರುವ ಪಕ್ಷಕ್ಕೆ ಅನ್ವಯಿಸುವುದಿಲ್ಲ ಎಂಬುದನ್ನು ಗಮನಿಸಿ. ಒಬ್ಬ ವಸ್ತುನಿಷ್ಠ, ನೇರ ಮತ್ತು ವಾಸ್ತವಾಂಶ ಆಧಾರಿತ ವಿದ್ವಾಂಸನಿಗೆ ಎಂದಿಗೂ ಮಧ್ಯಮ ಮಾರ್ಗವನ್ನು ಹೊಂದಲು ಅನುಮತಿ ನೀಡಲಾಗುವುದಿಲ್ಲ; ಅವರನ್ನು ಎಂದಿಗೂ ಕೇಂದ್ರ ಉದಾರವಾದಿ, ಮುಕ್ತ ಉದಾರವಾದಿ ಅಥವಾ ಪ್ರಾಮಾಣಿಕ ಉದಾರವಾದಿ ಎಂದು ಗುರುತಿಸಲಾಗುವುದಿಲ್ಲ. ನಮ್ಮ ಸಾರ್ವಜನಿಕ ಸಂವಾದದಲ್ಲಿ ಮಧ್ಯಬಿಂದುವನ್ನು ಹೊಂದಿರುವ ಯಾವುದೇ ಮಾನದಂಡವಿಲ್ಲ. "ಉದಾರವಾದಿ" ಎಂಬ ಪದವು ಭಾರತೀಯ ಸಮಾಜವನ್ನು ಕೇವಲ ಒಂದು ಎಡ ಸೈದ್ಧಾಂತಿಕ ಕೋನದಿಂದ ನೋಡುವವರ ಖಾಸಗಿ ಏಕಸ್ವಾಮ್ಯವಾಗಿ ಮಾರ್ಪಟ್ಟಿರುವಂತಿದೆ. ಹೌದು, ಎಡ ಸೈದ್ಧಾಂತಿಕ ಕೋನ - ಮತ್ತು ಇಲ್ಲಿ ಕುಲಪತಿ ಶಾಂತಿಶ್ರೀ ಅವರು ಪ್ರತಿದಿನ ಇದನ್ನು ಎದುರಿಸುತ್ತಿದ್ದಾರೆ.

ಇದು ಅಧಿಕೃತ ಭಾರತೀಯ ಉದಾರವಾದಿ ಮೌಲ್ಯಗಳು ಮತ್ತು ಹೇರಲ್ಪಟ್ಟ ಉದಾರವಾದದ ನಡುವಿನ ಬಿರುಕಾಗಿದೆ. ಮೊದಲನೆಯದು ಪೂರ್ವಪಕ್ಷದಲ್ಲಿ ಬೇರೂರಿರುವ ಚರ್ಚೆಯ ಪ್ರಾಚೀನ ಅಭ್ಯಾಸವಾಗಿದೆ - ಖಂಡನೆಯನ್ನು ಮಂಡಿಸುವ ಮೊದಲು ನಿಮ್ಮ ಎದುರಾಳಿಯ ವಾದವನ್ನು ಅದರ ಅತ್ಯಂತ ಬಲವಾದ ಮತ್ತು ಸ್ಪಷ್ಟವಾದ ರೂಪದಲ್ಲಿ ಪ್ರಸ್ತುತಪಡಿಸಬೇಕೆಂಬ ನಿಯಮವದು. ಅದು ಭಾರತೀಯ ಸಂಪ್ರದಾಯವಾಗಿತ್ತು; ಪೂರ್ವಪಕ್ಷವು ಇದನ್ನು ಪ್ರತಿಪಾದಿಸಿತ್ತು. ಎರಡನೆಯದು ಮುಖ್ಯವಾದ ಸದಸ್ಯತ್ವದ ಕಾರ್ಡ್ ಇದ್ದಂತೆ, ಅಲ್ಲಿ ಸ್ವಯಂ ಘೋಷಿತ ದ್ವಾರಪಾಲಕನೊಬ್ಬ ಯಾರು ವೇದಿಕೆಯನ್ನು ಪ್ರವೇಶಿಸಬೇಕು ಮತ್ತು ಯಾರು ಪ್ರವೇಶಿಸಬಾರದು ಎಂಬುದನ್ನು ನಿರ್ಧರಿಸುತ್ತಾನೆ. ಸಾರ್ವಜನಿಕ ಸಂವಾದವು ಮುಕ್ತ ವೇದಿಕೆಯಂತೆ ಕಾರ್ಯನಿರ್ವಹಿಸುವುದು ಆತ್ಮವಿಶ್ವಾಸವಿರುವ ಯಾವುದೇ ನಾಗರಿಕತೆಗೇ ಆಗಲಿ ಮುಖ್ಯವಾಗಿರುತ್ತದೆ. ವೇದಿಕೆಯ ಎಡಭಾಗದಲ್ಲಿ, ಬಲಭಾಗದಲ್ಲಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮಧ್ಯಭಾಗದಲ್ಲಿಯೂ ಜಾಗವಿರಬೇಕು.

ಚಿಂತಕರು ಎರಡೂ ಕಡೆಯಿಂದ ಪ್ರವೇಶಿಸಲು ಶಕ್ತರಾಗಿರಬೇಕು. ಅವರೇ ನಟರು; ಅವರು ವೇದಿಕೆಗೆ ಬರುತ್ತಾರೆ, ನಿಮಗಾಗಿ ಅಭಿನಯಿಸಲು ಮಧ್ಯಭಾಗದಲ್ಲಿರುತ್ತಾರೆ. ಬಲಭಾಗದಲ್ಲಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮಧ್ಯಭಾಗದಲ್ಲಿ. ಆದ್ದರಿಂದ ಚಿಂತಕರು ಎರಡೂ ಕಡೆಯಿಂದ ಪ್ರವೇಶಿಸಲು, ತಮ್ಮ ವಾದಗಳನ್ನು ವೇದಿಕೆಯ ಮಧ್ಯಭಾಗಕ್ಕೆ ಕೊಂಡೊಯ್ಯಲು ಮತ್ತು ಆ ಎಲ್ಲ ವಿಚಾರಗಳು ಮುಕ್ತವಾಗಿ ಸ್ಪರ್ಧಿಸಲು ಸಾಧ್ಯವಾಗಬೇಕು. ಆಲೋಚಿಸುವುದು ಮತ್ತು ಒಂದು ಅಭಿಪ್ರಾಯವನ್ನು ರೂಪಿಸಿಕೊಳ್ಳುವುದು ವೀಕ್ಷಕರಿಗೆ ಬಿಟ್ಟ ವಿಷಯ. ನಮ್ಮ ನೆನಪುಗಳು ಇದನ್ನು ಮಂಥನ - ಬೌದ್ಧಿಕ ಸಮುದ್ರ ಮಂಥನ ಎಂದು ಕರೆಯುತ್ತವೆ. ದೇವತೆಗಳು ಮತ್ತು ಅಸುರರು ಮಂದಾರ ಪರ್ವತದ ಎರಡೂ ಬದಿಗಳಲ್ಲಿ ತಮ್ಮ ಸ್ಥಾನಗಳನ್ನು ಪಡೆದುಕೊಂಡಂತೆಯೇ ಇದೂ ಕೂಡ. ಪರಸ್ಪರ ವಿರುದ್ಧ ಶಕ್ತಿಗಳ ಘರ್ಷಣೆಯ ಮೂಲಕವೇ ಸತ್ಯದ ಅಮೃತವು ಹೊರಹೊಮ್ಮಿತು. ಮತ್ತು ಅದುವೇ ನಮ್ಮ ತತ್ವಶಾಸ್ತ್ರ, ಅದುವೇ ನಮ್ಮ ಸಂಪ್ರದಾಯ, ಅದು ನಮ್ಮ ಡಿಎನ್‌ಎಯಲ್ಲಿಯೇ ಇದೆ.

ಆ ಆಟ ಎಂದಿಗೂ ಮುಗಿಯುವುದಿಲ್ಲ. ಪ್ರಶ್ನೆಗಳು ಮತ್ತು ಸ್ವತಂತ್ರ ಅನ್ವೇಷಣೆಯ ಮೂಲಾಂಶಗಳೊಂದಿಗೆ ಅದು ಪ್ರೇಕ್ಷಕರನ್ನು ಮನೆಗೆ ಕಳುಹಿಸುತ್ತದೆ. ಹೀಗಾಗಿ, ಪ್ರೇಕ್ಷಕರು ಎರಡೂ ಕಡೆಯವರು ಮಂಥನ ಮಾಡುವುದನ್ನು, ಹಗ್ಗವನ್ನು ತಮ್ಮ ತಮ್ಮ ಕಡೆಗೆ ಎಳೆಯುವುದನ್ನು ನೋಡುತ್ತಾರೆ. ಮತ್ತು ಅದರಿಂದ ಬರುವ ಫಲಿತಾಂಶವೂ ಪ್ರೇಕ್ಷಕರಿಗೆ ನೋಡಲು ಸಿಗುತ್ತದೆ. ಆದಾಗ್ಯೂ, ದಶಕಗಳ ಕಾಲ ನಮ್ಮ ಸಾಂಸ್ಕೃತಿಕ ಮತ್ತು ಬೌದ್ಧಿಕ ವ್ಯವಸ್ಥೆಯು ವೇದಿಕೆಯ ಒಂದು ಬದಿ ಮಾತ್ರ ಅತಿಯಾದ ಪ್ರಾಧಾನ್ಯತೆ ಗಿಟ್ಟಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿತು, ಪರ್ಯಾಯ ಆಲೋಚನಾ ಸಂಪ್ರದಾಯಗಳನ್ನು ಅದು ಸಾಹಿತ್ಯ, ಶೈಕ್ಷಣಿಕ, ಸಂಗೀತ, ರಂಗಭೂಮಿ, ಸಿನಿಮಾ ಹೀಗೆ ಯಾವುದೇ ಕ್ಷೇತ್ರವಿರಲಿ ಎಲ್ಲೆಡೆ ಹಿನ್ನೆಲೆಗೆ ತಳ್ಳಲಾಯಿತು. ಒಂದೇ ಸೈದ್ಧಾಂತಿಕ ಬದಿಯ ಈ ಅತಿಯಾದ ಉಪಸ್ಥಿತಿಯು ಮತ್ತೊಂದು ಬದಿಯನ್ನು ಸಂಪೂರ್ಣವಾಗಿ ಅಳಿಸಿಹಾಕುವ ಮಟ್ಟಿಗೆ ಇತ್ತು... ಆದರೆ ಕೆಲವೇ ಕೆಲವು ಭೈರಪ್ಪನವರು ಇದಕ್ಕೆ ಹೊರತಾಗಿದ್ದರು.

ಕೇವಲ ಒಂದು ಬದಿಯ ನಟರನ್ನು ಹೊಂದಿರುವ ವೇದಿಕೆಯು ನಾಟಕವನ್ನು ಸೃಷ್ಟಿಸುವುದಿಲ್ಲ; ಅದು ಕೇವಲ ಒಂದು ಸೈದ್ಧಾಂತಿಕ ಸ್ವಗತಕ್ಕೆ ಹಾದಿ ಮಾಡಿಕೊಡುತ್ತದೆ. ಡಾ. ಭೈರಪ್ಪ ಅವರ ಬೌದ್ಧಿಕ ಧೈರ್ಯವು ಮತ್ತೊಂದು ಬದಿಯೂ ಸಕ್ರಿಯವಾಗಿರುವಂತೆ ನೋಡಿಕೊಂಡಿತು. ಸಾಂಸ್ಥಿಕ ತೀರ್ಪುಗಾರರು ವಿರೋಧಿಸಿದಾಗಲೂ, ಅವರು ತಮ್ಮ ಲಕ್ಷಾಂತರ ಓದುಗರ ನೇರ ಬೆಂಬಲದೊಂದಿಗೆ ಆ ಮಿತಿಯನ್ನು ಹೊರಗಿನಿಂದಲೇ ಮುರಿದರು. ಯಾವ ಪರ್ಯಾಯ ದೃಷ್ಟಿಕೋನವು ಅಸ್ತಿತ್ವದಲ್ಲಿಯೇ ಇಲ್ಲ ಎಂದು ಸ್ಥಾಪಿತ ವ್ಯವಸ್ಥೆಯು ದೀರ್ಘಕಾಲದಿಂದಲೂ ಪ್ರತಿಪಾದಿಸುತ್ತಲೇ ಬಂದಿತ್ತೋ, ಆ ಬದಿಗೆ ಅತ್ಯಂತ ಉತ್ಸಾಹಿ ಪ್ರೇಕ್ಷಕ ವರ್ಗವಿದೆ ಎಂಬುದನ್ನು ಅವರು ಸಾಬೀತುಪಡಿಸಿದರು. ಆದರೆ ಈ ನಿರಾಕರಣೆಯ ರಚನೆಯಿದೆಯಲ್ಲ, ಇದನ್ನು ಈ ದೇಶದಲ್ಲಿ ಮುಂದುವರಿಯಬೇಕಾದ ಪ್ರಮುಖ ಚರ್ಚಾ ವಿಷಯವಾಗಿ ಬಿಡಲು ನಾನು ಬಯಸುತ್ತೇನೆ.

ಇದೆಲ್ಲದಕ್ಕೂ ಬಹಳ ದೀರ್ಘವಾದ ಇತಿಹಾಸವಿದೆ. ಭಾರತದ ಬೌದ್ಧಿಕ ವೇದಿಕೆಯನ್ನು ಮೂಲೆಗುಂಪು ಮಾಡುವ ಪ್ರಕ್ರಿಯೆಯು 1947 ಕ್ಕಿಂತ ಮುಂಚೆಯೇ ಆರಂಭವಾಗಿತ್ತು. ಇದು ವಸಾಹತುಶಾಹಿ ಇತಿಹಾಸ ಶಾಸ್ತ್ರದಲ್ಲಿಯೇ ಪ್ರಾರಂಭವಾಯಿತು. ಈ ಮೊದಲು ಭಾಷಣ ಮಾಡಿದ ಪ್ರಶಸ್ತಿ ಪುರಸ್ಕೃತರು ಈ ನಿರಾಕರಣೆಯು ಯಾವೆಲ್ಲಾ ಹಂತಗಳಲ್ಲಿ ಸಂಭವಿಸಿದೆ ಎಂಬುದನ್ನು ನಿಮಗೆ ವಿವರಿಸಿದ್ದಾರೆ. ನಾನು ಅದನ್ನು ಇಲ್ಲಿ ಹೇಳಲು ಬಯಸಿರಲಿಲ್ಲ, ಆದರೆ ಇಂದಿನ ಇತಿಹಾಸದಂತೆ, ವಿಕ್ರಮ್ ಅವರು ಸರಿಯಾಗಿಯೇ ಹೇಳಿದಂತೆ ಇಂದಿನ ಪ್ರಶಸ್ತಿಗಳಲ್ಲಿ ಬಂಗಾಳವು ಪ್ರಾಬಲ್ಯ ಸಾಧಿಸಿದೆ. ಬಂಗಾಳ: ಕ್ಲೈವ್ ಪ್ಲಾಸಿ (ಪಲಾಶ) ಕದನವನ್ನು ಮಾಡಿದುದರ ಬಗೆಗೆ ನಾವು ಓದುವ ಇತಿಹಾಸವು, ಟಿಪ್ಪುವಿನಂತೆ, ಸೋಲಿಸಲ್ಪಟ್ಟ ಬಂಗಾಳದ ಆಡಳಿತಗಾರನ ಕ್ರೌರ್ಯದ ಬಗ್ಗೆ ಎಂದಿಗೂ ಹೇಳುವುದಿಲ್ಲ.

ನಮ್ಮ ಹಣೆಬರಹವನ್ನು ನೋಡಿ, ಪ್ಲಾಸಿ ಕದನದ ನಂತರ ಕ್ಲೈವ್ ಹೋದ ಕಡೆಯಲ್ಲೆಲ್ಲಾ ಬಂಗಾಳದ ಜನರು ಆ ಕ್ರೂರಿ ರಾಜನನ್ನು ಸೋಲಿಸಿದ್ದಕ್ಕಾಗಿ ಕ್ಲೈವ್‌ನನ್ನು ಅದ್ದೂರಿಯಾಗಿ ಸ್ವಾಗತಿಸಿದರು. ಇದು ದುರದೃಷ್ಟಕರವೇ. ಆದರೆ ಈ ಇತಿಹಾಸವನ್ನು ನಮಗೆ ತೋರಿಸಿಯೇ ಇಲ್ಲ. "ಓಹ್! ಒಬ್ಬ ಭಾರತೀಯ ರಾಜನನ್ನು, ರಾಷ್ಟ್ರೀಯತಾವಾದಿ ರಾಜನನ್ನು ಇಂಗ್ಲಿಷ್ ವ್ಯಾಪಾರಿಯೊಬ್ಬ ಸೋಲಿಸಿದನು" ಎಂಬುದನ್ನು ಮಾತ್ರ ನೀವು ಕೇಳಿರಬಹುದು. ಆದರೆ ಸೋಲಿಸಲ್ಪಟ್ಟ ಈ ವ್ಯಕ್ತಿಯ ಕ್ರೌರ್ಯದ ಬಗ್ಗೆ ನೀವು ಕೇಳಿರುವುದೇ ಇಲ್ಲ. ಅದು ಕ್ಲೈವ್‌ನನ್ನೇನೂ ಸದ್ಗುಣ ಸಂಪನ್ನನಾಗಿಸುವುದಿಲ್ಲ. ಆದರೆ ಸತ್ಯವೇನೆಂದರೆ, ಇತಿಹಾಸವನ್ನು ಮುಚ್ಚಿಹಾಕಿದ ವಿಧಾನಗಳು ಇವು. ಭಾರತೀಯ ಶಿಕ್ಷಣದ ಕುರಿತಾದ ತನ್ನ ಟಿಪ್ಪಣಿಯಲ್ಲಿ ಮೆಕಾಲೆ ಹೀಗೆ ಪ್ರತಿಪಾದಿಸುತ್ತಾನೆ: 'ಒಂದು ಉತ್ತಮ ಯುರೋಪಿಯನ್ ಗ್ರಂಥಾಲಯದ ಒಂದೇ ಒಂದು ಕಪಾಟು ಭಾರತ ಮತ್ತು ಅರೇಬಿಯಾದ ಸಂಪೂರ್ಣ ದೇಸೀ ಸಾಹಿತ್ಯಕ್ಕೆ ಸಮಾನವಾಗಿದೆ ಎಂಬ ಮಾತನ್ನು ನಿರಾಕರಿಸುವ ಒಬ್ಬನೇ ಒಬ್ಬ ವ್ಯಕ್ತಿಯೂ ಅವರಲ್ಲಿ ನನಗೆ ಕಂಡುಬಂದಿಲ್ಲ ಎಂಬುದನ್ನು ನಾನು ಉಲ್ಲೇಖಿಸಬಯಸುತ್ತೇನೆ.'

'ಸಂಸ್ಕೃತ ಭಾಷೆಯಲ್ಲಿ ಬರೆಯಲಾದ ಎಲ್ಲಾ ಪುಸ್ತಕಗಳಿಂದ ಸಂಗ್ರಹಿಸಲಾದ ಎಲ್ಲಾ ಐತಿಹಾಸಿಕ ಮಾಹಿತಿಯು, ಇಂಗ್ಲೆಂಡ್‌ನ ಪೂರ್ವಸಿದ್ಧತಾ ಶಾಲೆಗಳಲ್ಲಿ ಬಳಸಲಾಗುವ ಅತ್ಯಂತ ಕ್ಷುಲ್ಲಕ ಸಂಕ್ಷಿಪ್ತ ಪಠ್ಯಗಳಲ್ಲಿ ಕಂಡುಬರುವುದಕ್ಕಿಂತ ಕಡಿಮೆ ಮೌಲ್ಯದ್ದಾಗಿದೆ' ಎಂದು ಅವನು ಹೇಳುತ್ತಾನೆ. ಈ ಹೇಳಿಕೆಯಲ್ಲಿರುವ ಅಸಂಬದ್ಧತೆಯ ಗಾಂಭೀರ್ಯವು ಆಳವಾಗಿ ನಮ್ಮ ತಲೆಗೆ ಹೊಕ್ಕಿದೆ ಎಂದು ನಾನು ಭಾವಿಸುತ್ತೇನೆ. ಮತ್ತು ಇದನ್ನು ಜನರಲ್ ಡಿಪಾರ್ಟ್‌ಮೆಂಟ್‌ನಲ್ಲಿ, 2 ಫೆಬ್ರುವರಿ 1835 ರ ಮೆಕಾಲೆಯ ಶೈಕ್ಷಣಿಕ ದಾಖಲೆಗಳ ಆಯ್ದ ಭಾಗದಲ್ಲಿ ದಾಖಲಿಸಲಾಗಿದೆ. ಆದರೆ 'ನನಗೆ ಸಂಸ್ಕೃತ ಅಥವಾ ಅರೇಬಿಕ್ ಎರಡರ ಜ್ಞಾನವೂ ಇಲ್ಲ,' ಎಂದು ಒಪ್ಪಿಕೊಳ್ಳುವ ಮೂಲಕವೇ ಮೆಕಾಲೆ ಈ ಟಿಪ್ಪಣಿಯನ್ನು ಆರಂಭಿಸುತ್ತಾನೆ. ಇದರಲ್ಲಿರವು ವ್ಯಂಗ್ಯ ಮತ್ತು ಅಹಂಕಾರ ಎರಡನ್ನೂ ನೀವು ಗಮನಿಸಿ.

ಆದರೆ ಇದನ್ನು ಮುಕ್ತಾಯಗೊಳಿಸುವಾಗ ಅವನು ನೀಡುವ ತೀರ್ಮಾನದಲ್ಲಿರುವ ಧಾರ್ಷ್ಟ್ಯತೆಯನ್ನು ನೋಡಿ. ಅವನು ಮೊದಲು ತನ್ನ ಅಜ್ಞಾನವನ್ನು ಒಪ್ಪಿಕೊಳ್ಳುತ್ತಾನೆ ಹಾಗೂ ತತ್‌ಕ್ಷಣವೇ ತನ್ನ ತೀರ್ಪನ್ನು ನೀಡುತ್ತಾನೆ. ಮತ್ತು ಅದಕ್ಕಾಗಿ ಯಾವುದೇ ಹಂತದಲ್ಲೂ ಪುರಾವೆ ನೀಡುವ, ಸಾಕ್ಷ್ಯವೊದಗಿಸುವ ಬಗೆಗೆ ತಲೆಕೆಡಿಸಿಕೊಳ್ಳಲಿಲ್ಲ. ಹಾಗೆ ನೀಡಿದ ತೀರ್ಪು ಅದು.

ವಿಚಾರಣೆ ಪ್ರಾರಂಭವಾಗುವ ಮೊದಲೇ ನೀಡಿದ ಶಿಕ್ಷೆ ಇದು. ಮತ್ತು ಇದು ಒಂದು ಇಡೀ ಉಪಖಂಡದ ಶಿಕ್ಷಣ ನೀತಿಯಾಯಿತು. 1817 ರಲ್ಲಿ, ಜೇಮ್ಸ್ ಮಿಲ್ 'ದಿ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ' ಅನ್ನು ಪ್ರಕಟಿಸಿದರು. ಈಸ್ಟ್ ಇಂಡಿಯಾ ಕಂಪನಿಯು ಗವರ್ನರ್‌ಗಳಾಗಿ ಕಳುಹಿಸುವ ಜನರಿಗೆ ತರಬೇತಿ ನೀಡುತ್ತಿದ್ದ ಹೇಲಿಬರಿಯ ಪ್ರಮಾಣಿತ ಪಠ್ಯ ಇದಾಗಿತ್ತು. ಮತ್ತು ಈ ಜೇಮ್ಸ್ ಮಿಲ್ ಅವರ 1817 ರ 'ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ' ಪುಸ್ತಕವನ್ನು ಭಾರತಕ್ಕೆ ಎಂದಿಗೂ ಕಾಲಿಡದೆ ಅಥವಾ ಯಾವುದೇ ಭಾರತೀಯ ಭಾಷೆಯನ್ನು ಕಲಿಯದೆಯೇ ಬರೆಯಲಾಗಿತ್ತು. ಭಾರತದಲ್ಲಿ ತನ್ನ ಕಣ್ಣು ಮತ್ತು ಕಿವಿಗಳನ್ನು ಬಳಸಿ ಜೀವಮಾನವಿಡೀ ಕಲಿಯುವುದಕ್ಕಿಂತ, ಸೂಕ್ತ ಅರ್ಹತೆ ಹೊಂದಿರುವ ವ್ಯಕ್ತಿಯೊಬ್ಬ ಇಂಗ್ಲೆಂಡ್‌ನಲ್ಲಿ ತನ್ನ ಅಧ್ಯಯನ ಕೊಠಡಿಯಲ್ಲಿ ಕುಳಿತು ಒಂದೇ ಒಂದು ವರ್ಷದಲ್ಲಿ ಭಾರತದ ಬಗ್ಗೆ ಹೆಚ್ಚು ಕಲಿಯಬಹುದು ಎಂದು ಅವರು ಪ್ರತಿಪಾದಿಸಿದರು.

ಭೈರಪ್ಪನವರು ಹೇಗೆ ವಿವಿಧ ಸ್ಥಳಗಳಿಗೆ ಹೋದರು, ಜನರೊಂದಿಗೆ ವಾಸಿಸಿದರು, ಹಿನ್ನೆಲೆಯನ್ನು ಅರ್ಥಮಾಡಿಕೊಂಡರು ಮತ್ತು ನಂತರ ಪುಸ್ತಕವನ್ನು ಬರೆದರು ಎಂಬುದರ ಕುರಿತು ನಾನು ಹೇಳಿದ್ದುದರೊಂದಿಗೆ ಇದನ್ನು ಹೋಲಿಸಿ ನೋಡಿ. ಅವರು ಒಂದು ಚೌಕಟ್ಟಿಗೆ ಸೀಮಿತಗೊಳ್ಳುತ್ತಾರೆ ಮತ್ತು ನಮ್ಮೊಂದಿಗೆ ಯಾವಾಗಲೂ ಹೀಗೆಯೇ ಆಗುತ್ತಿದೆ. ನಮ್ಮ ಶಾಲೆ ಮತ್ತು ಕಾಲೇಜುಗಳಲ್ಲಿಯೂ ಇದನ್ನೇ ನಮಗೆ ಕಲಿಸಲಾಗುತ್ತಿದೆ. ಯಾವ ನಾಗರಿಕತೆಯನ್ನು ಅವರು ತಿರಸ್ಕರಿಸುತ್ತಲೇ ಬಂದಿದ್ದರೋ ಆ ನಾಗರಿಕತೆಯು ಸಾವಿರಾರು ವರ್ಷಗಳಿಂದ ಅತ್ಯಂತ ಅತ್ಯಾಧುನಿಕ ಐತಿಹಾಸಿಕ ದಾಖಲೆಗಳನ್ನು ಕಾಯ್ದುಕೊಂಡಿತ್ತು. ಸಾಮಾನ್ಯ ಶಕೆ 1148 ಮತ್ತು 1150 ರ ನಡುವೆ ಕಾಶ್ಮೀರದಲ್ಲಿದ್ದ ಕಲ್ಹಣನು ಇತಿಹಾಸಕಾರನ ಕರ್ತವ್ಯವನ್ನು ವ್ಯಾಖ್ಯಾನಿಸುವ ಮೂಲಕ ತನ್ನ 'ರಾಜತರಂಗಿಣಿ'ಯನ್ನು ಪ್ರಾರಂಭಿಸಿದನು. ಮತ್ತು ಅವನು ಸಂಸ್ಕೃತ ಭಾಷೆಯಲ್ಲಿ ಹೇಳುವುದಾದರೂ ಏನು? ಅದನ್ನು ನಾನು ಅನುವಾದಿಸುತ್ತೇನೆ. 'ಆ ಉದಾತ್ತ ವ್ಯಕ್ತಿ ಮಾತ್ರ ಪ್ರಶಂಸೆಗೆ ಅರ್ಹನು,' ಎಂದು ಅವನು ಹೇಳುತ್ತಾನೆ. 'ಹಿಂದಿನ ಘಟನೆಗಳನ್ನು ವಿವರಪೂರ್ಣವಾಗಿ ಹೇಳುವಾಗ ಯಾರ ಮಾತುಗಳು ರಾಗ ಮತ್ತು ದ್ವೇಷದಿಂದ ಮುಕ್ತವಾಗಿದ್ದು, ನ್ಯಾಯಾಧೀಶರಂತೆ ನಿಷ್ಪಕ್ಷಪಾತವಾಗಿರುತ್ತವೆಯೋ, ಆ ಉದಾತ್ತ ವ್ಯಕ್ತಿ ಮಾತ್ರವೇ ಪ್ರಶಂಸೆಗೆ ಅರ್ಹನು.'

ಸಾಮಾನ್ಯ ಶಕೆ 1198 ರ ಕಲ್ಹಣನ ರಾಜತರಂಗಿಣಿಯ ದಾಖಲೆ ಒಂದೆಡೆಯಿದ್ದರೆ, ಶತಮಾನಗಳ ನಂತರ ಬಂದ ಮೆಕಾಲೆ ತನಗೆ ಸಂಸ್ಕೃತ ಅಥವಾ ಅರೇಬಿಕ್ ತಿಳಿದಿಲ್ಲ ಎಂದು ಹೇಳುತ್ತಲೇ, 'ಇಗೋ, ನಾನು ಇದರ ಬಗ್ಗೆ ತೀರ್ಪು ನೀಡುತ್ತೇನೆ' ಎನ್ನುತ್ತಾನೆ. ಯಾವ ರಾಜತರಂಗಿಣಿಯ ಬಗೆಗೆ ನಾನು ನಿಮಗೆ ಹೇಳಿದೆನೋ ಅದು ವಸ್ತುನಿಷ್ಠತೆಯ ವ್ಯಾಖ್ಯಾನವಾಗಿದೆ. ಮೆಕಾಲೆಗಿಂತ ಎಂಟು ಶತಮಾನಗಳ ಮೊದಲು ಬರೆಯಲಾದ ಇದನ್ನು ಯಾವುದೇ ಆಧುನಿಕ ಇತಿಹಾಸಕಾರರು ಸಂತೋಷದಿಂದ ಒಪ್ಪಿಕೊಳ್ಳಬಹುದು. ಆರ್. ಜಿ. ಭಂಡಾರ್ಕರ್, ಕೆ. ಪಿ. ಜೈಸ್ವಾಲ್ ಮತ್ತು ಹೇಮಚಂದ್ರ ರಾಯ್ ಚೌಧರಿ ಅವರಂತಹ ರಾಷ್ಟ್ರೀಯತಾವಾದಿ ವಿದ್ವಾಂಸರು ನಮ್ಮಲ್ಲೇ ಇದ್ದ ಈ ದಾಖಲೆಗಳನ್ನು ಮರುಶೋಧಿಸಿದಾಗ, ಭಾರತದ ಕಟ್ಟುನಿಟ್ಟಾದ ಐತಿಹಾಸಿಕ ಪ್ರಜ್ಞೆ ಬೆಳಕಿಗೆ ಬಂತು. ಈಗ ಅದನ್ನು ಮಾಡುತ್ತಿರುವ ಹೊಸ ಪೀಳಿಗೆಯೇ ಇದೆ. ಅವರು ಇಲ್ಲಿಯೇ ನನ್ನ ಎದುರೇ ಇದ್ದಾರೆ ಮತ್ತು ಇದು ನನಗೆ ರೋಮಾಂಚನವನ್ನುಂಟು ಮಾಡುತ್ತದೆ. ನಮ್ಮ ಇತಿಹಾಸಕಾರರು, ಆ ಸಂಪ್ರದಾಯವು ಇಂದು ಹೆಚ್ಚು ಹೆಚ್ಚು ತನ್ನದೇ ಆದ ಅಸ್ತಿತ್ವವನ್ನು ಪಡೆದುಕೊಳ್ಳುತ್ತಿದೆ ಮತ್ತು ಸ್ವಾತಂತ್ರ್ಯದ ನಂತರದ ಹಲವಾರು ದಶಕಗಳಲ್ಲಿ ನಾವು ಕಳೆದುಕೊಂಡಿದ್ದು ಇದನ್ನೇ.

ಹಾಗಾದರೆ 1947 ರ ನಂತರ ಏನಾಯಿತು ಮತ್ತು ಅದನ್ನು ನಿರಾಕರಿಸಿದ್ದಕ್ಕಾಗಿ ತೆತ್ತ ಬೆಲೆ ಏನು? ರಾಜಕೀಯ ಸ್ವಾತಂತ್ರ್ಯವು ತನ್ನೊಂದಿಗೆ ಬೌದ್ಧಿಕ ವಸಾಹತುಶಾಹಿಯಿಂದ ಮುಕ್ತಿಯನ್ನೂ ತರುತ್ತದೆ ಎಂದು ಯಾರೇ ಆದರೂ ಸಹಜವಾಗಿಯೇ ಆಶಿಸಬಹುದಿತ್ತು, ಆದರೆ ಹಾಗಾಗಲಿಲ್ಲ. ಅದಕ್ಕಾಗಿಯೇ ಗೌರವಾನ್ವಿತ ಪ್ರಧಾನಮಂತ್ರಿಯವರು ಕೆಂಪುಕೋಟೆಯ ಮೇಲೆ ನಿಂತು 'ಪಂಚ ಪ್ರಾಣ್: ಈ ವಸಾಹತುಶಾಹಿ ಮನಸ್ಥಿತಿಯಿಂದ ಹೊರಬನ್ನಿ, ವಸಾಹತುಶಾಹಿಯಾದ ಪ್ರತಿಯೊಂದರಿಂದಲೂ ಹೊರಬನ್ನಿ' ಎಂದು ಕರೆ ನೀಡಿದ್ದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಅವರು ಇದನ್ನು ಈಗ ಹೇಳಬೇಕಾಗಿ ಬಂದಿದೆ. 60-70 ವರ್ಷಗಳ ಕೊನೆಗೆ ಕೇಂದ್ರ ಶಿಕ್ಷಣ ಸಚಿವಾಲಯಗಳ ಪ್ರೋತ್ಸಾಹದ ಅಡಿಯಲ್ಲಿ ICHR, NCERT, ICSSR ನಂತಹ ಪ್ರಮುಖ ಸಂಶೋಧನಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ವಿಭಾಗಗಳು ಸೈದ್ಧಾಂತಿಕ ಜಾಲಗಳ ಕೋಟೆಗಳಾಗಿ ಮಾರ್ಪಟ್ಟವು. ಅವುಗಳಿಗೆ ಅಪಾರವಾದ ಬೆಂಬಲ, ಧನಸಹಾಯ ಮತ್ತು ಪ್ರೋತ್ಸಾಹ ದೊರೆಯಿತು.

ಇದರ ಪರಿಣಾಮವಾಗಿ ಅವು ಅದೆಷ್ಟು ಆಳವಾಗಿ ಬೇರೂರಿ, ಎಂತಹ ಯಶಸ್ಸು ಕಂಡವೆಂದರೆ ಇಂದಿಗೂ ಕೂಡ ಅವುಗಳನ್ನು ಕಿತ್ತೊಗೆಯುವುದು ನಮಗೆ ಕಷ್ಟಕರವಾಗಿದೆ. NCERT ಪಠ್ಯಪುಸ್ತಕಗಳು ಪ್ರತಿ ಕಾಲಘಟ್ಟದಲ್ಲಿಯೂ ವರ್ಗ ಸಂಘರ್ಷ ಮತ್ತು ಆರ್ಥಿಕ ನಿಯತಿವಾದವನ್ನು ಸಾಂಸ್ಥಿಕಗೊಳಿಸಿದವು. ರೋಮಿಲಾ ಥಾಪರ್ ಅವರ 'ಏನ್ಷಿಯಂಟ್ ಇಂಡಿಯಾ' 1966; ಆರ್. ಎಸ್. ಶರ್ಮಾ ಅವರ 'ಏನ್ಷಿಯಂಟ್ ಇಂಡಿಯಾ' 1977; ಸತೀಶ್ ಚಂದ್ರ ಅವರ 'ಮೆಡೀವಲ್ ಇಂಡಿಯಾ' 1978; ಬಿಪಿನ್ ಚಂದ್ರ ಅವರ 'ಮಾಡರ್ನ್ ಇಂಡಿಯಾ' 1971. ವಾಹ್! ಸಂಪುಟಗಳ ಮೇಲೆ ಸಂಪುಟಗಳು, ಅವುಗಳ ಪ್ರಸರಣ ಹಾಗೂ ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ನೀಡಲಾದ ಕಡ್ಡಾಯ ಆದೇಶಗಳು. ಇವೇ ಕೇಂದ್ರಬಿಂದುಗಳಾಗಿ ಪ್ರತಿಯೊಂದೂ ಇವುಗಳ ಸುತ್ತಲೇ ನಿರೂಪಿಸಲ್ಪಟ್ಟವು. ವಿಜಯನಗರ, ಪಲ್ಲವರು, ಚೋಳರು, ಪಾಂಡ್ಯರು, ಅಹೋಮರು, ಮರಾಠರು ಮತ್ತು ನಮ್ಮ ನೌಕಾ ಸಾಮ್ರಾಜ್ಯಗಳ ನಾಗರಿಕತೆಯ ನಿರಂತರತೆಗಳನ್ನು ಕೇವಲ ಅಡಿಟಿಪ್ಪಣಿಗಳಿಗೆ ಸೀಮಿತಗೊಳಿಸಲಾಯಿತು; ಆದರೆ ಆಕ್ರಮಣಕಾರರಿಗೆ ಇಡೀ ಇಡೀ ಅಧ್ಯಾಯಗಳನ್ನೇ ಮೀಸಲಿಡಲಾಯಿತು.

ಮತ್ತು ಆ ಅಧಿಕೃತ ನಿಲುವನ್ನು ನಿರಾಕರಿಸಿದ್ದಕ್ಕಾಗಿ ತೆತ್ತ ಬೆಲೆಯನ್ನು ಸ್ವತಃ ಭೈರಪ್ಪನವರೇ 1969 ರಲ್ಲಿ ತಿಳಿಸಿಕೊಟ್ಟರು. ಭೈರಪ್ಪನವರ ಕುರಿತಾದ ಆ ವಿಡಿಯೋ ತುಣುಕಿನಲ್ಲಿ ನಾವು ಅದನ್ನು ನೋಡಿದ್ದೇವೆ. ರಾಷ್ಟ್ರೀಯ ಭಾವೈಕ್ಯತೆಯ ಹೆಸರಿನಲ್ಲಿ ಶಾಲಾ ಪಠ್ಯಪುಸ್ತಕಗಳನ್ನು ಮರುಪರಿಶೀಲಿಸಲು ರಾಜತಂತ್ರಜ್ಞ ಜಿ. ಪಾರ್ಥಸಾರಥಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರವು ಐದು ಸದಸ್ಯರ ರಾಷ್ಟ್ರೀಯ ಸಮಿತಿಯೊಂದನ್ನು ನೇಮಿಸಿತು. ಆ ಸಮಿತಿಯು ಕಾಶಿ ವಿಶ್ವನಾಥ ಮತ್ತು ಮಥುರಾ ದೇವಾಲಯಗಳ ಧ್ವಂಸಕ್ಕೆ ಸಂಬಂಧಿಸಿದ ದಾಖಲಿತ ಉಲ್ಲೇಖಗಳನ್ನು ತೆಗೆದುಹಾಕಲು ಮುಂದಾದಾಗ, ಡಾ. ಭೈರಪ್ಪನವರು ತಮ್ಮ ಮೂಲಭೂತ ತತ್ವಗಳ ಆಧಾರದ ಮೇಲೆ ಆಕ್ಷೇಪ ವ್ಯಕ್ತಪಡಿಸಿದರು. ಪ್ರತಿ ವರ್ಷ ಲಕ್ಷಾಂತರ ಯಾತ್ರಿಕರು ಕಾಶಿ ಮತ್ತು ಮಥುರಾಕ್ಕೆ ಹೋಗುತ್ತಾರೆ ಮತ್ತು ಧ್ವಂಸಗೊಂಡ ದೇವಾಲಯದ ರಚನೆಗಳ ಮೇಲೆ ಮಸೀದಿಗಳು ನಿಂತಿರುವುದನ್ನು ಅವರ ಕಣ್ಣಾರೆ ಕಾಣುತ್ತಾರೆ ಎಂಬ ಅಂಶವನ್ನು ಅವರು ಎತ್ತಿ ಹಿಡಿದರು.

ಹಾಗೊಂದು ವೇಳೆ ಇತಿಹಾಸವು ಸತ್ಯಾಧಾರಿತವಾಗಿಲ್ಲದಿದ್ದರೆ, ಅದಕ್ಕೆ ಇರುವ ಮೌಲ್ಯವಾದರೂ ಏನು ಎಂದು ಅವರು ನೇರವಾಗಿ ಪ್ರಶ್ನಿಸಿದರು. ಅಕ್ಟೋಬರ್ 8, 2006 ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡ ಸ್ವತಃ ಭೈರಪ್ಪನವರೇ ಬರೆದ ಲೇಖನವನ್ನು ನಾನು ಇದಕ್ಕೆ ಆಕರವಾಗಿ ಪಡೆದುಕೊಂಡಿದ್ದೇನೆ. ಆ ಆಕ್ಷೇಪಣೆಗಳು ಶೈಕ್ಷಣಿಕವಾಗಿ ಸರಿಯಾಗಿವೆ ಎಂದು ರಾಜತಂತ್ರಜ್ಞ ಜಿ. ಪಾರ್ಥಸಾರಥಿ ಅವರು ವೈಯಕ್ತಿಕವಾಗಿ ಒಪ್ಪಿಕೊಂಡರು, ಆದರೆ ಸರ್ಕಾರದ ನೀತಿಯು ಇದನ್ನು ಪಠ್ಯಪುಸ್ತಕದಿಂದ ಇದನ್ನು ತೆಗೆದುಹಾಕಲೇಬೇಕೆಂದು ಬಯಸುತ್ತದೆ ಎಂದು ಪ್ರತಿಪಾದಿಸಿದರು. ಅದಕ್ಕಾಗಿಯೇ ಇತಿಹಾಸವನ್ನು ತಿರುಚಿದ ಇತಿಹಾಸಕಾರರಿಗೆ ದೊರೆತ ಪ್ರೋತ್ಸಾಹವು ಅಪಾರವಾಗಿತ್ತು ಮತ್ತು ಅದು ಸ್ವತಃ ಸರ್ಕಾರದಿಂದಲೇ ಬಂದಿತ್ತು ಎಂದು ನಾನು ಹೇಳಿದ್ದು. ಭೈರಪ್ಪನವರು ತಮ್ಮ ವಾದದಿಂದ ಹಿಂದೆ ಸರಿಯಲು ನಿರಾಕರಿಸಿದರು ಮತ್ತು ಸುಮಾರು ಹದಿನೈದು ದಿನಗಳ ನಂತರ ಅವರನ್ನು ಹೊರಗಿಟ್ಟು ಸಮಿತಿಯನ್ನು ಪುನರ್ ರಚಿಸಲಾಯಿತು. ನಾವು ನೋಡಿದ ವಿಡಿಯೋದಲ್ಲಿರುವ ಸಂದರ್ಶನದಲ್ಲಿ ಅವರು ಇದನ್ನೇ ಹೇಳುತ್ತಾರೆ. ಅವರ ಸ್ಥಾನವು ಸರ್ಕಾರದಿಂದ ಅನುಮೋದಿಸಲ್ಪಟ್ಟ ಇತಿಹಾಸಕಾರ ಅರ್ಜುನ್ ದೇವ್ ಅವರಿಗೆ ಹೋಯಿತು.

ಅಪ್ರಾಮಾಣಿಕತೆಯ ಹೆಸರಿನಲ್ಲಿ ನೆನಪನ್ನು ನಿರ್ವಹಿಸುವುದು ಬಹಳ ಅಪರೂಪವಾದ ಸಂಗತಿಯಾಗಿದೆ. ಅದನ್ನು ಯಾವಾಗಲೂ ವಿವೇಕ ಅಥವಾ ಜಾಣ್ಮೆಯ ಹೆಸರಿನಲ್ಲೇ ನಿರ್ವಹಿಸಲಾಗುತ್ತದೆ ಮತ್ತು ಇದೇ ಕಾರಣಕ್ಕಾಗಿ ಅದನ್ನು ವಿರೋಧಿಸುವುದು ತುಂಬಾ ಕಷ್ಟಕರವಾಗುತ್ತದೆ. ಮತ್ತು ಈ ಅಸಮತೋಲನವು ಒಂದರ ನಂತರ ಒಂದರಂತೆ ಎಲ್ಲಾ ಭಾಷೆಗಳಲ್ಲೂ ಮುಂದುವರಿಯಿತು. ಈ ಅಸಮತೋಲನವು ತೆಲುಗು ಸಾಹಿತ್ಯದಲ್ಲೂ ಮುಂದುವರಿಯಿತು. ಶ್ರೀ ಶ್ರೀ ಶ್ರೀರಂಗಂ ಶ್ರೀನಿವಾಸ ರಾವ್ ಅವರು ತಮ್ಮ 'ಮಹಾಪ್ರಸ್ಥಾನಂ' ಕೃತಿಯಲ್ಲಿ ಕ್ರಾಂತಿಕಾರಿ ಪರಿಕಲ್ಪನೆಯನ್ನು ಸೆರೆಹಿಡಿದರು. ಅವರು ತೆಲುಗಿನಲ್ಲಿ ಹೀಗೆ ಹೇಳುತ್ತಾರೆ:

“ಈ ದೇಸ ಚರಿತ್ರ ಚೂಸಿನಾ ಏಮಂಡಿ ಗರ್ವಕಾರನಂ?

ನರಜಾತಿ ಚರಿತ್ರ ಸಮಸ್ತಮ್ ಪರಪಿದಾನ ಪಾರಾಯನ ಭಾವಮ್”

'ಯಾವುದೇ ದೇಶದ ಇತಿಹಾಸವನ್ನು ನೋಡಿ.' ನಾನು ಆ ಸಾಲುಗಳನ್ನು ಅನುವಾದಿಸುತ್ತಿದ್ದೇನೆ. ಯಾವುದೇ ದೇಶದ ಇತಿಹಾಸವನ್ನು ನೋಡಿ. ಅದರಲ್ಲಿ ಹೆಮ್ಮೆ ಪಡುವಂತಹದ್ದು ಏನಿದೆ? ಮಾನವ ಜನಾಂಗದ ಇಡೀ ಇತಿಹಾಸವು ದಮನದ ಹಾದಿಯಲ್ಲೇ ಸಾಗಿದೆ. 1950 ರ 'ಮಹಾಪ್ರಸ್ಥಾನಂ' ಕೃತಿಯಲ್ಲಿನ 'ದೇಶಚರಿತ್ರಲು' ಎಂಬ ತಮ್ಮ ಕವಿತೆಯಲ್ಲಿ ಅವರು ಇದನ್ನು ಹೇಳುತ್ತಾರೆ.

ಮತ್ತೊಬ್ಬ ಪ್ರಸಿದ್ಧ ತೆಲುಗು ಬರಹಗಾರರಾದ ಚಲಂ ಅವರು ಸ್ಥಾಪಿತ ಕೌಟುಂಬಿಕ ಮತ್ತು ಸಾಮಾಜಿಕ ರಚನೆಗಳಿಗೆ ನೇರವಾಗಿ ಸವಾಲು ಹಾಕುವ ಮೂಲಕ ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ಮತ್ತೊಂದು ಬದಿಯಲ್ಲಿ ಭಾರತದ ನಾಗರಿಕತೆಯ ನಿರಂತರತೆಯನ್ನು ಸಮರ್ಥಿಸಿಕೊಂಡ ಕವಿ ಸಾಮ್ರಾಟ್ ವಿಶ್ವನಾಥ ಸತ್ಯನಾರಾಯಣ ಇದ್ದರು. ಅವರನ್ನು ನಂತರ ಒಂದು ಚೌಕಟ್ಟಿಗೆ ಸೀಮಿತಗೊಳಿಸಲಾಯಿತು. ಜಗತ್ತಿಗೆ ಮತ್ತೊಂದು ರಾಮಾಯಣದ ಅಗತ್ಯವೇಕಿದೆ ಎಂದು ಕೇಳಿದಾಗ, ಅವರು 'ಮರಲ ನೈತ ಇಲ್ಲ ರಾಮಾಯಣಂ ಬನ್ನಚ್ಚೋ' ಎಂಬ ಸ್ಪಷ್ಟ ಪ್ರಶ್ನೆಯೊಂದಿಗೆ 'ರಾಮಾಯಣ ಕಲ್ಪವೃಕ್ಷಂ' ಕೃತಿಯನ್ನು ಆರಂಭಿಸಿದರು. ಅಂದರೆ, 'ಮತ್ತೆ ರಾಮಾಯಣವೇಕೆ?' ಎಂದು ನೀವು ಕೇಳಿದರೆ, ಅದಕ್ಕಾಗಿಯೇ ನಾನು 'ರಾಮಾಯಣ ಕಲ್ಪವೃಕ್ಷಂ' ಬರೆಯುತ್ತಿದ್ದೇನೆ ಎಂದರ್ಥ. ತೆಲುಗಿನಲ್ಲಿ ಸಾಹಿತ್ಯದ ದ್ವಾರಪಾಲಕರು ಕೆಲವರನ್ನು ಹೇಗೆ ಒಳಗೆ ಬಿಡುತ್ತಿದ್ದರು ಮತ್ತು ಇನ್ನು ಕೆಲವರನ್ನು ಹೇಗೆ ಒಂದು ಚೌಕಟ್ಟಿಗೆ ಸೀಮಿತಗೊಳಿಸುತ್ತಿದ್ದರು ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ.

ಹೀಗಾಗಿ ವಿಶ್ವನಾಥ ಅವರಿಗೆ 1962 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ನಂತರ 1970 ರಲ್ಲಿ ಜ್ಞಾನಪೀಠ ಪ್ರಶಸ್ತಿ ಲಭಿಸಿತು, ಆದರೆ ಇದು ಶ್ರೀ ಶ್ರೀ ಅವರಿಗೆ ಎಂದಿಗೂ ಸಿಗಲಿಲ್ಲ. ಅವರಿಗೆ ಅವರದ್ದೇ ಆದ ಓದುಗ ವರ್ಗವಿತ್ತು, ಅನುಯಾಯಿಗಳಿದ್ದರು; ಓದುಗರೇ ಅವರಿಗೆ ಎಲ್ಲವೂ ಆಗಿದ್ದರು. ಆದರೆ ನಾನು ನಿಮ್ಮ ಮುಂದೆ ಸೃಷ್ಟಿಸುತ್ತಿರುವ ರೂಪಕದಂತೆ, ರಂಗದ ಮೇಲೆ ಇವೆಲ್ಲವೂ ಸಮಾನವಾಗಿ ಪ್ರದರ್ಶನಗೊಂಡವೇ? ಖಂಡಿತವಾಗಿಯೂ ಇಲ್ಲ. ವಿಮರ್ಶಕರು ಮತ್ತು ನಿಯತಕಾಲಿಕೆಗಳು, ಪಠ್ಯಕ್ರಮ ಮತ್ತು ಸಾಹಿತ್ಯಿಕ ನಕ್ಷೆ ಎಲ್ಲವನ್ನೂ ಮತ್ತೊಂದು ಬಣದ ಸುತ್ತಲೇ ರೂಪಿಸಲಾಯಿತು. ವಿಶ್ವನಾಥ ಅವರನ್ನು ಒಬ್ಬ ಪರಿಷ್ಕರಣಾವಾದಿ, ಪುನರುಜ್ಜೀವನವಾದಿ, ಹಳೆಯ ಛಂದಸ್ಸಿಗೆ ಅಂಟಿಕೊಂಡಿರುವ ವ್ಯಕ್ತಿ ಎಂದು ಹಣೆಪಟ್ಟಿ ಕಟ್ಟಿ ಬದಿಗಿಡಲಾಯಿತು; ಅವರ ಪಾಂಡಿತ್ಯವನ್ನು ಒಪ್ಪಿಕೊಳ್ಳಲಾಯಿತಾದರೂ ಅವರನ್ನು ಮೂಲೆಗುಂಪು ಮಾಡಲಾಯಿತು. ಹಾಗಾದರೆ, ಇದು ಕೇವಲ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಮಾತ್ರ ನಡೆದಿತ್ತು ಎಂದು ನೀವು ಭಾವಿಸಿದರೆ ಅದು ತಪ್ಪು; ತಮಿಳುನಾಡಿನಲ್ಲಿ ಇದಕ್ಕಿಂತಲೂ ಕೆಟ್ಟ ಪರಿಸ್ಥಿತಿಯಿತ್ತು.

ನಾನು ಇತ್ತೀಚಿನ ಘಟನೆಯಿಂದ ಪ್ರಾರಂಭಿಸಿ ಒಂದು ಕ್ಷಣ ಹಿಂದಕ್ಕೆ ಹೋಗುತ್ತೇನೆ. ಫೆಬ್ರುವರಿ 2009 ರ ಬಜೆಟ್ ಭಾಷಣದಲ್ಲಿ ಸಚಿವರು - ನನ್ನ ನೆನಪಿನಲ್ಲಿರುವಂತೆ ಅವರು ಪ್ರೊಫೆಸರ್ ಅನ್ಬಳಗನ್ ಎನಿಸುತ್ತದೆ- ತಮ್ಮ ಭಾಷಣದಲ್ಲಿ 'ನಾವು 28 ಬರಹಗಾರರ ಗೌರವ ಮತ್ತು ಘನತೆಯನ್ನು ಮರುಸ್ಥಾಪಿಸುತ್ತೇವೆ' ಎಂದು ಹೇಳಿದರು. ಫೆಬ್ರುವರಿ 2009 ರ ಬಜೆಟ್ ಭಾಷಣದಲ್ಲಿ 'ನಾವು 28 ಬರಹಗಾರರ ಗೌರವ ಮತ್ತು ಘನತೆಯನ್ನು ಮರುಸ್ಥಾಪಿಸುತ್ತೇವೆ' ಎಂದರು. ಹಾಗಾದರೆ ಆ 28 ಬರಹಗಾರರು ಯಾರು? ನಾನು ಅವರ ಹೆಸರುಗಳನ್ನು ಹೇಳುತ್ತೇನೆ, ಆದರೆ ಅದಕ್ಕೂ ಮೊದಲು, ಇವರು 1949 ಅಥವಾ ಅದಕ್ಕಿಂತ ಸ್ವಲ್ಪ ಮುಂಚಿನಿಂದಲೂ ಇದ್ದ ಬರಹಗಾರರು. 1949 ರಲ್ಲಿ ಡಿಎಂಕೆ ಪಕ್ಷವಾಗಿ ಜನ್ಮತಾಳಿತು ಮತ್ತು ಅದಕ್ಕೂ ಮೊದಲು ದ್ರಾವಿಡ ಇಯಕ್ಕಂ ಅಥವಾ ದ್ರಾವಿಡ ಚಳವಳಿಯು ದ್ರಾವಿಡ ಕಳಗಂ ಹೆಸರಿನಲ್ಲಿ ಅದಾಗಲೇ ಪ್ರಾರಂಭವಾಗಿತ್ತು. ಇದು ರಾಜಕೀಯ ಪಕ್ಷಕ್ಕಿಂತ ಹೆಚ್ಚಾಗಿ ಒಂದು ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯಾಗಿತ್ತು.

ಆದ್ದರಿಂದ, ಅಂದಿನಿಂದ ಯಾರ ಬರಹಗಳಲ್ಲಿ ರಾಷ್ಟ್ರೀಯತೆ ಅಥವಾ ಹಿಂದುತ್ವದ ಲಕ್ಷಣವಿರುತ್ತಿತ್ತೋ ಅಥವಾ ಹಿಂದೂ ಧರ್ಮಕ್ಕೆ ಸಂಬಂಧಿಸಿದ ಸಾಹಿತ್ಯ, ಅದು ರಾಮಾಯಣವಿರಲಿ ಅಥವಾ ಮಹಾಭಾರತವಿರಲಿ ಇವುಗಳ ಪ್ರಭಾವವಿರುತ್ತಿತ್ತೋ, ಅಂತಹ ಬರಹಗಾರರನ್ನು ಒಂದು ಚೌಕಟ್ಟಿಗೆ ಸೀಮಿತಗೊಳಿಸಲಾಯಿತು, ಅವರನ್ನು ನಿರ್ಲಕ್ಷಿಸಲಾಯಿತು, ಅಷ್ಟೇ ಏಕೆ, ಅವರಿಗೆ ಕಿರುಕುಳ ನೀಡಲಾಯಿತು ಮತ್ತು ಸಾರ್ವಜನಿಕವಾಗಿ ಅವಮಾನಿಸಲಾಯಿತು. ಅವರಲ್ಲಿ ಅನೇಕರಿಗೆ ಹೀಗಾಯಿತು ಮತ್ತು ಈ ಚಳವಳಿಯು ಅತ್ಯಂತ ತೀವ್ರವಾಗಿತ್ತು. ಇದಕ್ಕೆ ಸರ್ಕಾರದ ಬೆಂಬಲವೂ ಇತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ತಮಿಳುನಾಡಿನಲ್ಲಿ ಸೋತ ನಂತರ, ಅಧಿಕಾರಕ್ಕೆ ಬಂದ ಪಕ್ಷವು ಯಾವಾಗಲೂ ದ್ರಾವಿಡ ಸಿದ್ಧಾಂತದಿಂದ ಪ್ರಭಾವಿತವಾಗಿತ್ತು. ಈ ಸಿದ್ಧಾಂತವು ರಾಷ್ಟ್ರೀಯತೆಯ ವಿರುದ್ಧ, ಸಂಸ್ಕೃತದ ವಿರುದ್ಧ ಮತ್ತು ಹಿಂದೂ ಚಿಂತನೆಯಿಂದ ಪ್ರಭಾವಿತವಾದ ಪ್ರತಿಯೊಂದರ ವಿರುದ್ಧವಾಗಿತ್ತು.

ಇದಕ್ಕೊಂದು ಸರಳ ಉದಾಹರಣೆಯೆಂದರೆ, ತಮಿಳಿನಲ್ಲಿ ಕಂಬನ್ ಬರೆದ 'ಕಂಬ ರಾಮಾಯಣಂ' ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಇದು ವಾಲ್ಮೀಕಿ ರಾಮಾಯಣದ ಯಥಾವತ್ ಅನುವಾದವಲ್ಲ. ಕಡಲತೀರ, ಪರ್ವತಗಳು, ಜೀವನಶೈಲಿಗಳು ಸೇರಿದಂತೆ ತಮಿಳಿನ ಅನೇಕ ಚಿಂತನೆಗಳು ಮತ್ತು ಜೀವನ ವಿಧಾನಗಳನ್ನು ಕಂಬನ್ ಅವರ ರಾಮಾಯಣದಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದನ್ನು ದ್ರಾವಿಡ ಚಳವಳಿಯು ತೀವ್ರವಾಗಿ ಟೀಕಿಸಿತು. ನಾನು ಯಾರ ಹೆಸರನ್ನೂ ಹೇಳುವುದಿಲ್ಲ, ಆದರೆ ಅತ್ಯಂತ ಪ್ರಮುಖ ತಮಿಳು ರಾಜಕೀಯ ನಾಯಕರೊಬ್ಬರು ರಾಮಾಯಣದಲ್ಲಿದ್ದ, ಶೃಂಗಾರ ರಸಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ಅತ್ಯಂತ ಕೆಟ್ಟದಾಗಿ ನಿಂದಿಸಿ ಬರೆದರು. ರಾಮಾಯಣವು ಅಶ್ಲೀಲವಾಗಿದೆ ಎಂದು ಬಿಂಬಿಸುವ ರೀತಿಯಲ್ಲಿ ಅದನ್ನು ಬರೆಯಲಾಗಿತ್ತು. ಆ ಮಟ್ಟಿಗೆ ಅವರು ರಾಮಾಯಣವನ್ನು ಅಪಕೀರ್ತಿಗೊಳಿಸಿದರು.

ಆದರೆ, ಮಹಾನ್ ದೇಶಭಕ್ತರಾಗಿದ್ದ ತಮಿಳರೊಬ್ಬರು 'ಇಲ್ಲ, ನಾನು ಇದನ್ನು ಒಪ್ಪುವುದಿಲ್ಲ' ಎಂದರು. "ರಾಮ ನನ್ನ ನಾಯಕ. ರಾಮ ನನ್ನ ದೇವರು ಮತ್ತು ರಾಮಾಯಣವು ನನಗೆ ಎಷ್ಟೋ ಒಳ್ಳೆಯ ವಿಷಯಗಳನ್ನು ತಿಳಿಸುತ್ತದೆ, ಅವುಗಳನ್ನು ನನ್ನ ಮಕ್ಕಳು ಮತ್ತು ಮುಂದಿನ ಪೀಳಿಗೆಯವರು ತಿಳಿದುಕೊಳ್ಳಬೇಕೆಂದು ನಾನು ಬಯಸುತ್ತೇನೆ" ಎಂದು ಹೇಳಿದರು. ಹಾಗಾಗಿ ಅವರು ಹಿಂದೂ ಧರ್ಮ, ರಾಷ್ಟ್ರೀಯತೆ, ಸಂಸ್ಕೃತ ಮತ್ತು ಹಿಂದೂ ಚಿಂತನೆಗೆ ವಿರುದ್ಧವಾಗಿದ್ದ ಆಡಳಿತಾರೂಢ ವ್ಯವಸ್ಥೆಯ ವಿರುದ್ಧ ದಂಗೆಯ ಸಂಕೇತವಾಗಿ ತಮಿಳುನಾಡಿನಾದ್ಯಂತ 'ಕಂಬರ್ ಕಳಗಂ' ಅನ್ನು ಸ್ಥಾಪಿಸಿದರು. ಅವರು ಎಲ್ಲೆಡೆ ಕಂಬರ್ ಕಳಗಂ ಅನ್ನು ಸ್ಥಾಪಿಸಿದರು. ಇಂದಿಗೂ ಆ ಕಂಬರ್ ಕಳಗಂ ಕಂಬ ರಾಮಾಯಣವನ್ನು ಪ್ರಚಾರ ಮಾಡುವಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ.

ಅದೇ ರೀತಿ, ರಸಿಕಮಣಿ ಟಿ.ಕೆ. ಚಿದಂಬರನಾಥಂ ಉದಯಾರ್ ಎಂಬ ಮತ್ತೊಬ್ಬ ಲೇಖಕರಿದ್ದರು. ಅವರೂ ಸಹ ರಾಮಾಯಣದ ಮಹಾನ್ ವಿದ್ವಾಂಸರಾಗಿದ್ದರು. ಅವರು 'ಕಂಬನ್ ತರುಮ್ ರಾಮಾಯಣಂ' ಅಂದರೆ 'ಕಂಬನ್ ನೀಡಿದ ರಾಮಾಯಣ' ಎಂಬ ಕೃತಿಯನ್ನು ಬರೆದರು. ಅವರನ್ನು ಬಹಿಷ್ಕರಿಸಲಾಯಿತು. ನೀವು ಇದನ್ನು ಹೇಗೆ ಮಾಡಲು ಸಾಧ್ಯ? ಇಂತಹವರು ಹಲವರಿದ್ದಾರೆ. ವೈಯಾಪುರಿ ಪಿಳ್ಳೈ ಒಬ್ಬ ಮಹಾನ್ ವಿದ್ವಾಂಸರಾಗಿದ್ದರು. ಅವರು ಸಾಹಿತ್ಯ ವಿಮರ್ಶಕರಾಗಿದ್ದರು. ಅವರನ್ನು ಬಹಿಷ್ಕರಿಸಲಾಯಿತು. ಆದ್ದರಿಂದ, ಫೆಬ್ರುವರಿ 2009 ರಲ್ಲಿ ತಮಿಳುನಾಡಿನ ಹಣಕಾಸು ಸಚಿವರು 'ನಾವು ಗೌರವ ಮತ್ತು ಘನತೆಯನ್ನು ಮರುಸ್ಥಾಪಿಸುತ್ತಿದ್ದೇವೆ' ಎಂದು ಹೇಳಿದ ಆ 28 ಬರಹಗಾರರು ಯಾರೆಂದರೆ, ರಾಷ್ಟ್ರೀಯವಾದಿಯಾಗಿದ್ದಕ್ಕಾಗಿ, ಭಾರತ ಮತ್ತು ಭಾರತದ ಪ್ರಾಚೀನ ಸಂಸ್ಕೃತಿಯ ಬಗ್ಗೆ ಯೋಚಿಸಿದ್ದಕ್ಕಾಗಿ ಬಹಿಷ್ಕರಿಸಲ್ಪಟ್ಟವರಾಗಿದ್ದರು.

ದ್ರಾವಿಡ ಚಳವಳಿಯ ಭಾಗವಾಗಿದ್ದ ಪಕ್ಷವೊಂದು ಅಧಿಕಾರಕ್ಕೆ ಬಂದು, ಬಜೆಟ್ ಭಾಷಣದಲ್ಲಿ 'ನಾವು ಅವರ ಗೌರವವನ್ನು ಮರುಸ್ಥಾಪಿಸಲು ಬಯಸುತ್ತೇವೆ' ಎಂದು ಹೇಳಬೇಕಾಯಿತು. ಅವರು ತಮ್ಮ ಜೀವಿತಾವಧಿಯಲ್ಲಿ ಪ್ರಕಟಿಸಿದ ಪುಸ್ತಕಗಳ ಸಂಖ್ಯೆಯ ಮೌಲ್ಯಮಾಪನದ ಆಧಾರದ ಮೇಲೆ ನಾವು ಹಣವನ್ನು ನೀಡುತ್ತೇವೆ ಎಂದರು ಅವರು. ಈ ಗೌರವ ಮರುಸ್ಥಾಪನೆ ನಡೆಯುವ ಹೊತ್ತಿಗೆ ಅವರಲ್ಲಿ ಕೆಲವರು ಜೀವಂತವಾಗಿಯೂ ಇರಲಿಲ್ಲ ಮತ್ತು ಇನ್ನು ಕೆಲವರು ಅವರನ್ನು

ರಾಷ್ಟ್ರೀಕರಣಗೊಳಿಸಿದ್ದಕ್ಕಾಗಿ, ಅವರ ಪುಸ್ತಕಗಳನ್ನು ರಾಷ್ಟ್ರೀಕರಣಗೊಳಿಸಿದ್ದಕ್ಕಾಗಿ ಪ್ರತಿಭಟಿಸಿದರು. ದ್ರಾವಿಡ ಸಿದ್ಧಾಂತದಿಂದಾಗಿ ದಶಕಗಳ ಕಾಲ ಈ ಕಿರುಕುಳ ಅನುಭವಿಸಿದ್ದ ಕುಟುಂಬಗಳು, ದ್ರಾವಿಡ ಸಂಸ್ಕೃತಿಯಿಂದ ತಿರಸ್ಕರಿಸಲ್ಪಟ್ಟ ತಮ್ಮ ತಾತ ಅಥವಾ ತಂದೆ ಬರೆದಿದ್ದನ್ನು ಪ್ರಕಟಿಸಲು ತಮ್ಮದೇ ಆದ ಸಣ್ಣ ಪ್ರಕಾಶನ ಸಂಸ್ಥೆಗಳನ್ನು ಹೊಂದಿದ್ದವು. ಅವರು, "ನಾವು ಪ್ರಕಟಿಸುತ್ತಿದ್ದೇವೆ. ನೀವು ಬಂದು ನಮಗೆ ಏನನ್ನೂ ಹೇಳಬೇಕಾಗಿಲ್ಲ. ನಾವು 200 ಪ್ರತಿಗಳನ್ನು ಅಥವಾ 500 ಪ್ರತಿಗಳನ್ನು ಪ್ರಕಟಿಸಬಹುದು. ಆದರೆ ಅದನ್ನು ರಾಷ್ಟ್ರೀಕರಣಗೊಳಿಸಲು ನೀವ್ಯಾರು? ಇಷ್ಟು ದಿನ ಅದನ್ನು ಅವಮಾನಿಸಿದವರೇ ನೀವು" ಎಂದರು.

ಅದೇನೇ ಇರಲಿ, ಅವುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಆದರೆ ಸ್ವತಂತ್ರ ಭಾರತದ ದ್ವಾರಪಾಲಕರಿಗೆ ವಿರುದ್ಧವಾಗಿದ್ದ ಸಿದ್ಧಾಂತಗಳ ಆಧಾರದ ಮೇಲೆ ಜನರನ್ನು ಒಂದು ಚೌಕಟ್ಟಿಗೆ ಸೀಮಿತಗೊಳಿಸಿದ ಇತಿಹಾಸವಿದು. ಇವರು ಭಾರತೀಯ ಸಂಸ್ಕೃತಿಯ ಬಗ್ಗೆ ಹೆಮ್ಮೆಯಿಂದ ಬರೆದ ಜನರು. ಆ ಎಲ್ಲಾ 28 ಬರಹಗಾರರ ಗೌರವವನ್ನು ಬಜೆಟ್ ಭಾಷಣದ ಮೂಲಕ ಮರುಸ್ಥಾಪಿಸಬೇಕಾಯಿತು ಮತ್ತು ಅದು ನಡೆದದ್ದು 2009 ರಲ್ಲಿ. ಆದ್ದರಿಂದ ಈ ಇಡೀ ದ್ವಾರಪಾಲಕ ವ್ಯವಸ್ಥೆಗೆ ಭಾರಿ ಬೆಂಬಲವಿತ್ತು. ನಮ್ಮಲ್ಲಿ ಎಷ್ಟು ಜನರು ಸೋವಿಯತ್ ಲ್ಯಾಂಡ್ ಪ್ರಕಾಶನಗಳಿಂದ ಪ್ರಭಾವಿತರಾಗಿಲ್ಲ ಹೇಳಿ? ಎಂತಹ ಅದ್ಭುತ ಪುಸ್ತಕಗಳು ಅವು! ಎಂತೆಂಥ ಸುಂದರವಾದ ಪುಸ್ತಕಗಳನ್ನು ಅವರು ಪ್ರಕಟಿಸಿದರು. ಆದರೆ ಅವೆಲ್ಲ ಪ್ರಚಾರದ ಸಾಮಗ್ರಿಗಳಾಗಿದ್ದವು! ಮತ್ತು ಅದರಲ್ಲಿ ಪುಷ್ಕಿನ್ ಅವರನ್ನು ಅರ್ಥಮಾಡಿಕೊಳ್ಳುವ ಮೂಲಕ ನಾನು ಪ್ರಯೋಜನ ಪಡೆದೆ. ಎಂತಹ ಸುಂದರವಾದ ರೇಖಾಚಿತ್ರಗಳು! ಆದರೆ ಕಮ್ಯುನಿಸ್ಟ್ ಇಂಟರ್ನ್ಯಾಷನಲ್ ಇದಕ್ಕೆಲ್ಲಾ ಧನಸಹಾಯ ನೀಡಿತ್ತು.

ತಮಿಳುನಾಡಿನ ಪ್ರತಿಯೊಂದು ಮನೆಯಲ್ಲೂ ವಿಯೆಟ್ನಾಂ ಯುದ್ಧ ಯಾಕೆ ಎಂಬ ಪುಸ್ತಕ ಬಂದು ತಲುಪುತ್ತಿತ್ತು. ಆದರೆ ನಾವು ಯುನೈಟೆಡ್ ಸ್ಟೇಟ್ಸ್‌ನಿಂದ ಗೋಧಿ ಮತ್ತು ಅಕ್ಕಿಯನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿಗೆ ಏಕೆ ಬರಬೇಕಾಯಿತು ಎಂದು ಹೇಳುವ ಯಾವುದೇ ಪುಸ್ತಕಗಳಿರಲಿಲ್ಲ. ನಮಗೆ ಅದನ್ನು ತಿಳಿಸಲು ಯಾವುದೇ ಪುಸ್ತಕಗಳಿರಲಿಲ್ಲ. 'ಯೆನ್ ಇಂದಾ ವಿಯೆಟ್ನಾಂ ಪೊರ್?' ಅಂದರೆ, ಈ ವಿಯೆಟ್ನಾಂ ಯುದ್ಧ ಏಕೆ ನಡೆಯುತ್ತಿದೆ ಎಂಬ ಪುಸ್ತಕದ ಪ್ರತಿಗಳನ್ನು ನಾನು ತಮಿಳಿನಲ್ಲಿ ಓದಿದ್ದೇನೆ, ಆದರೆ ಈ ಎಲ್ಲಾ ಪ್ರಕಾಶನಗಳನ್ನು ಮತ್ತು ಸುಂದರವಾದ ಸಾಂಸ್ಕೃತಿಕ ಕೇಂದ್ರವನ್ನು ಬೆಂಬಲಿಸಲು ಈ ಹಣವು ಬಂದಿತ್ತು. ಖಂಡಿತವಾಗಿಯೇ ಶಾಂತಿಶ್ರೀ ಅವರು ಇದರ ಬಗ್ಗೆ ನಮಗೆ ಇನ್ನೂ ಹೆಚ್ಚಿನದನ್ನು ಹೇಳಬಲ್ಲರು ಎಂದು ನಾನು ಭಾವಿಸುತ್ತೇನೆ. ನಿಮ್ಮ ಮನಸ್ಸಿನೊಳಗೆ ನುಸುಳಲು ಈ ಅದ್ಭುತ ಪ್ರಕಾಶನಗಳ ಮೂಲಕ ಕೈಗೊಂಡ ಪ್ರಯತ್ನಗಳು ನಮ್ಮನ್ನು ಸುಮಾರು 2000 ನೇ ಇಸವಿಯವರೆಗೆ ಕರೆದೊಯ್ದಿರಬಹುದು ಎಂದು ನಾನು ಭಾವಿಸುತ್ತೇನೆ. ಮತ್ತು ಅದರ ನಂತರ ಸಹಜವಾಗಿಯೇ ಅನೇಕ ವಿಕ್ರಮ್ ಸಂಪತ್‌ರು ತಮ್ಮದೇ ಆದ ಕೆಲಸವನ್ನು ಮಾಡುತ್ತಿದ್ದಾರೆ.

ಇದು ಜಾಗತಿಕವಾಗಿ ಕಂಡುಬರುವ ಒಂದು ಮಾದರಿಯಾಗಿದೆ. ನಾನು ಕೇರಳದ ಬಗ್ಗೆ ಇಲ್ಲಿಯವರೆಗೂ ಮಾತನಾಡದಿದ್ದುದನ್ನು ನೀವು ಗಮನಿಸಿರಬಹುದು. ಪ್ರೋಗ್ರೆಸ್ ಪಬ್ಲಿಕೇಷನ್ಸ್ 1966 ರಲ್ಲಿ ಮಲಯಾಳಂ ವಿಭಾಗವನ್ನು ಪ್ರಾರಂಭಿಸಿತು. ಆದರೆ ಕೇರಳದ ಪ್ರಭಾತ್ ಬುಕ್ ಹೌಸ್ 28 ಶಾಖೆಗಳನ್ನು ನಡೆಸುತ್ತಾ, ಮೊಬೈಲ್ ವ್ಯಾನ್‌ಗಳ ಮೂಲಕ ಹಳ್ಳಿಗಳಿಗೆ ಪ್ರಚಾರದ ಪುಸ್ತಕಗಳನ್ನೇ ಕಳುಹಿಸುತ್ತಿತ್ತು. ಪಾಲ್ ಝುಕಾರಿಯಾ ಅವರಂತಹ ಬರಹಗಾರರು ಸಹ, "ನನಗೆ 12 ವರ್ಷವಾಗುವಷ್ಟರಲ್ಲಿ ನಾನು ಕಟ್ಟಾ ಕಮ್ಯುನಿಸ್ಟ್ ಆಗಿದ್ದೆ" ಎಂದು ಒಮ್ಮೆ ಹೇಳಿದ್ದರು. ಮಕ್ಕಳ ಮೇಲೆ ಇದು ಬೀರಿದ್ದಿರಬಹುದಾದ ಪ್ರಭಾವವನ್ನು ಊಹಿಸಿಕೊಳ್ಳಿ. ಕಂಬನ್ ಅವರನ್ನು ಜೀವಂತವಾಗಿಡಲು ತಮಿಳುನಾಡಿನಲ್ಲಿ ಸಾ. ಗಣೇಶನ್ ಅವರು ಪ್ರಾರಂಭಿಸಿದ ಕಂಬನ್ ಕಳಗಂ ಬಗ್ಗೆ ನಾನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ಆದರೆ ತೀರಾ ಇತ್ತೀಚೆಗೆ ಅಂದರೆ 2013 ರಲ್ಲಿ ಜೋ ಡಿ ಕ್ರೂಜ್- ನಿಮ್ಮಲ್ಲಿ ಎಷ್ಟು ಜನ ಇದರ ಬಗೆಗೆ ಕೇಳಿದ್ದೀರೋ ಗೊತ್ತಿಲ್ಲ-ತಮಿಳುನಾಡಿನ ದಕ್ಷಿಣ ಭಾಗದ ಮೀನುಗಾರ ಸಮುದಾಯಕ್ಕೆ ಸೇರಿದ ಅವರು 'ಆಳಿ ಸೂರ್ ಉಲಗು' ಅಂದರೆ ಸಮುದ್ರದಿಂದ ಆವೃತವಾದ ಜಗತ್ತು ಎಂಬ ಪುಸ್ತಕವನ್ನು ಬರೆದರು.

ಕೇಂದ್ರ ಸಾಹಿತ್ಯ ಅಕಾಡೆಮಿಯು ಅವರಿಗೆ ಪ್ರಶಸ್ತಿಯನ್ನು ಘೋಷಿಸಿತು. ಆದರೆ ಅವರು ಪ್ರಶಸ್ತಿಯನ್ನು ಸ್ವೀಕರಿಸುವ ಮೊದಲೇ ಪ್ರಕಾಶಕರು, "ಇಲ್ಲ ಇಲ್ಲ, ನಾವು ನಿಮ್ಮ ಪುಸ್ತಕವನ್ನು ಪ್ರಕಟಿಸುವುದಿಲ್ಲ, ಕ್ಷಮಿಸಿ" ಎಂದರು ಮತ್ತು ಅಲ್ಲಿ ದೊಡ್ಡ ಗದ್ದಲವೇ ಉಂಟಾಯಿತು. ಯಾಕೆ ಗೊತ್ತೇ? ಅವರು ಗುಜರಾತ್ ಮುಖ್ಯಮಂತ್ರಿಯ ಅತ್ಯುತ್ತಮ ಆಡಳಿತ, ಆ ರಾಜ್ಯಕ್ಕೆ ಕೈಗಾರಿಕೆಗಳು ಬಂದಿದ್ದು ಮತ್ತು ಬಹುರಾಷ್ಟ್ರೀಯ ಕಂಪನಿಗಳ ಬಗೆಗಿದ್ದ ತಿಳುವಳಿಕೆಯನ್ನು ಶ್ಲಾಘಿಸಿದ್ದರು. ಅವರು ಸ್ವತಃ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕೆಲಸ ಮಾಡಿದ್ದರು. ಆದರೆ ತಮ್ಮ ಮೀನುಗಾರ ಸಮುದಾಯ ಮತ್ತು ಕರಾವಳಿ ಪ್ರದೇಶದ ಬಗ್ಗೆ ಈ ಅದ್ಭುತ ಪುಸ್ತಕವನ್ನು ಬರೆದಿದ್ದರು. ಆದರೆ, ಪ್ರಕಾಶಕರು ಅವರ ಪುಸ್ತಕವನ್ನು ಪ್ರಕಟಿಸಲು ನಿರಾಕರಿಸಿದರು. "ಇಲ್ಲ ಇಲ್ಲ, ನೀವು ಮುಖ್ಯಮಂತ್ರಿಯನ್ನು ಹಾಗೆ ಹೇಗೆ ಹೊಗಳಬಹುದು?" ಎಂದು ಅವರು ಪ್ರಶ್ನಿಸಿದರು. ಹೀಗೆ, ಇದು 2013ರವರೆಗೂ ಮುಂದುವರೆಯಿತು.

ಸೋವಿಯತ್ ಯುಗದ ಆಂಡ್ರೇ ಝ್ದಾನೋವ್ ಆಗಸ್ಟ್ 1934 ರಲ್ಲಿ ಹೀಗೆ ಹೇಳುತ್ತಾರೆ: "ಹೌದು, ಸೋವಿಯತ್ ಸಾಹಿತ್ಯವು ಪಕ್ಷಪಾತ ಆಧಾರಿತವಾಗಿದೆ. ಏಕೆಂದರೆ ವರ್ಗ ಸಂಘರ್ಷದ ಯುಗದಲ್ಲಿ ವರ್ಗ ಸಾಹಿತ್ಯವಲ್ಲದೇ ಬೇರಾವ ಸಾಹಿತ್ಯ ಇರಲು ಸಾಧ್ಯವಿಲ್ಲ ಮತ್ತು ಇರುವುದೂ ಇಲ್ಲ, ಆದ್ದರಿಂದ ನಾವು ಪ್ರಕಟಿಸುತ್ತೇವೆ." ಅದು ಬಹಿರಂಗ ಹೇಳಿಕೆಯಾಗಿತ್ತು. ಮತ್ತು ಆ ಪ್ರಕಾಶನವು ಕೇವಲ ಸೋವಿಯತ್ ಭೂಮಿಗೆ ಮಾತ್ರ ಸೀಮಿತವಾಗದೆ ಪ್ರಪಂಚದಾದ್ಯಂತ ಹರಡಿತು. ಅವರು ಎಷ್ಟರ ಮಟ್ಟಿಗೆ ಹೋದರೆಂದರೆ, ಅದ್ಭುತ ಸಂಗೀತಗಾರ ಚೈಕೋವ್ಸ್ಕಿ ಅವರನ್ನು ಸಹ ಒಂದು ಬ್ರ್ಯಾಂಡ್ ಆಗಿಸಿ, ಮತ್ತೆ ರಿಬ್ರ್ಯಾಂಡ್ ಮಾಡಿ ಸಾಕಷ್ಟು ಸಿದ್ಧತೆಗಳ ನಂತರ ಅವರನ್ನು ನಿಜವಾದ ರಷ್ಯಾದ ಪ್ರತಿಭೆ ಎಂದು ಒಪ್ಪಿಕೊಳ್ಳಲಾಯಿತು. ಆದರೆ ಮೊದಲಿಗೆ ಅವರನ್ನು ಹೊರಹಾಕಲಾಗಿತ್ತು ಮತ್ತು ಸಾಕಷ್ಟು ತಿದ್ದಿ ತೀಡಿದ ನಂತರ ಅವರನ್ನು ಮತ್ತೆ ಕರೆತರಲಾಯಿತು.

ಬ್ರಿಟನ್‌ನಲ್ಲೂ ಸಹ ಇತ್ತೀಚಿನವರೆಗೂ ರೋಜರ್ ಸ್ಕ್ರೂಟನ್ ಅವರು ಸಹ ಕೆಲವು ವಿಷಯಗಳ ಬಗ್ಗೆ ಮಾತನಾಡುತ್ತಿದ್ದುದನ್ನು ನೀವು ಕೇಳಿರಬಹುದು. 1979 ರಲ್ಲಿ 'ದಿ ಮೀನಿಂಗ್ ಆಫ್ ಕನ್ಸರ್ವೇಟಿಸಂ' ಎಂಬ ತಮ್ಮ ಪುಸ್ತಕವನ್ನು ಪ್ರಕಟಿಸಿದ್ದು ಅವರ ಶೈಕ್ಷಣಿಕ ವೃತ್ತಿಜೀವನದಲ್ಲಿ ಉಳಿದಿದ್ದನ್ನು ಹೇಗೆ ಸಂಪೂರ್ಣವಾಗಿ ಹಾಳುಮಾಡಿತು ಎಂಬುದನ್ನು ಅವರು ವಿವರಿಸಿದರು. ಬ್ರಿಟನ್‌ನಲ್ಲಿ 1979 ರಷ್ಟು ಇತ್ತೀಚಿನವರೆಗೂ, ಬಲಪಂಥೀಯ ಸಿದ್ಧಾಂತದ ಪರವಾಗಿಯೇ ಬರೆಯುತ್ತಿದ್ದ ವ್ಯಕ್ತಿಯೊಬ್ಬರು 'ದಿ ಮೀನಿಂಗ್ ಆಫ್ ಕನ್ಸರ್ವೇಟಿಸಂ' ಬರೆದಿದ್ದಕ್ಕಾಗಿ ಅವರ ವೃತ್ತಿಜೀವನವೇ ಕೊನೆಗೊಂಡಿತು. ಬೇರೇನಿಲ್ಲ. ತಮ್ಮ ಕೇಂಬ್ರಿಡ್ಜ್ ಕಾಲೇಜು ಗ್ರಂಥಾಲಯದಲ್ಲಿ ಮಾರ್ಕ್ಸ್, ಲೆನಿನ್ ಮತ್ತು ಮಾವೋ ಅವರ ಪುಸ್ತಕಗಳು ಕಂಡುಬಂದವೇ ಹೊರತು ಸ್ಮಾಟ್ಸ್, ಹೋಗೆಲಿನ್, ಹಯೆಕ್ ಅಥವಾ ಫ್ರೀಡ್‌ಮ್ಯಾನ್ ಅವರ ಪುಸ್ತಕಗಳಿರಲಿಲ್ಲ ಎಂದು ಅವರು ಹೇಳಿದ್ದರು. ಅವರು ಇದನ್ನು 2003 ರಲ್ಲಿ ಹೇಳುತ್ತಾರೆ. ಶಿಕ್ಷಣ ವ್ಯವಸ್ಥೆಯಲ್ಲಿ ಬಲಪಂಥೀಯರನ್ನು ಏಕೆ ಮೂಲೆಗುಂಪು ಮಾಡಲಾಗುತ್ತದೆ, ಮಾಧ್ಯಮಗಳಲ್ಲಿ ಏಕೆ ನಿಂದಿಸಲಾಗುತ್ತದೆ ಮತ್ತು ರಾಜಕೀಯ ವರ್ಗವು ಅವರನ್ನು ಏಕೆ ಅಸ್ಪೃಶ್ಯರಂತೆ ಕಾಣುತ್ತದೆ ಎಂದು ಅವರು ತಮ್ಮ 'ಫೂಲ್ಸ್, ಫ್ರಾಡ್ಸ್ ಅಂಡ್ ಫೈರ್‌ಬ್ರಾಂಡ್ಸ್' ಎಂಬ ಪುಸ್ತಕದಲ್ಲಿ ಪ್ರಶ್ನಿಸಿದ್ದಾರೆ.

ಯುನೈಟೆಡ್ ಕಿಂಗ್‌ಡಮ್‌ನಂತಹ ದೇಶದಲ್ಲೂ ಇಂತಹ ಕಿರುಕುಳವಿದೆ ಎಂದು ಅವರು ಹೇಳುತ್ತಾರೆ. ಮಾರ್ಗರೆಟ್ ಥ್ಯಾಚರ್ ಅವರು ಇದರ ಪರಿಣಾಮವಾಗಿ ಉಂಟಾಗುವ ಒಮ್ಮತವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ: "ಯಾರೂ ನಂಬದ ಆದರೆ ಯಾರೂ ಆಕ್ಷೇಪಿಸದ ಯಾವುದನ್ನೋ ಹುಡುಕುವ ಸಲುವಾಗಿ ಎಲ್ಲಾ ನಂಬಿಕೆಗಳು, ತತ್ವಗಳು, ಮೌಲ್ಯಗಳು ಮತ್ತು ನೀತಿಗಳನ್ನು ಕೈಬಿಡುವ ಪ್ರಕ್ರಿಯೆ." ಮಾರ್ಗರೆಟ್ ಥ್ಯಾಚರ್ ಅವರು ತಮ್ಮ ವಿಶಿಷ್ಟ ಶೈಲಿಯಲ್ಲಿ ಇದನ್ನು ಸುಂದರವಾಗಿ ಸೆರೆಹಿಡಿದಿದ್ದಾರೆ. ಇದನ್ನು ನಾನು ನೆನಪಿಸಿಕೊಳ್ಳುವುದು ಯೋಗ್ಯವಾಗಿದೆ. "ಯಾರೂ ನಂಬದ ಆದರೆ ಯಾರೂ ಆಕ್ಷೇಪಿಸದ ಯಾವುದನ್ನೋ ಹುಡುಕುವ ಸಲುವಾಗಿ ಎಲ್ಲಾ ನಂಬಿಕೆಗಳು, ತತ್ವಗಳು, ಮೌಲ್ಯಗಳು ಮತ್ತು ನೀತಿಗಳನ್ನು ಕೈಬಿಡುವ ಪ್ರಕ್ರಿಯೆ."

ಆದರೆ, ಇವತ್ತು ಆಕ್ಷೇಪಣೆಯು ಜೋರಾಗಿ ಮತ್ತು ಸ್ಪಷ್ಟವಾಗಿ ಕೇಳಿಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇಲ್ಲಿನ ಚಿಂತಕರಿಂದಲೂ ಇದನ್ನೇ ನಿಖರವಾಗಿ ಆಗ್ರಹಿಸಲಾಯಿತು. ಕೃತಕ ರಾಜಕೀಯ ಒಮ್ಮತಕ್ಕೆ ಶರಣಾಗಿ ಅಥವಾ ಸಾಂಸ್ಕೃತಿಕ

ಅಳಿಸಿಹಾಕುವಿಕೆಯನ್ನು ಎದುರಿಸಿ. ದಶಕಗಳಿಂದ ನಾವು ಅದನ್ನು ನೋಡಿದ್ದೇವೆ. ಈ ಗೇಟ್‌ಕೀಪಿಂಗ್ ಮುಂದುವರಿದಿದೆ. ನಾನು ಹೆಚ್ಚೇನೂ ಹೇಳಬೇಕಾಗಿಲ್ಲ. ಇಲ್ಲೇ ನೋಡಿ, ಡಾ. ವಿಕ್ರಮ್ ಸಂಪತ್ ಅವರು ಇತಿಹಾಸದಲ್ಲಿ ಡಾಕ್ಟರೇಟ್ ಹೊಂದಿದ್ದರೂ ಮತ್ತು ಸಾವಿರಾರು ಪ್ರಾಥಮಿಕ ದಾಖಲೆಗಳು ಹಾಗೂ ನೂರಾರು ಖಾಸಗಿ ದಾಖಲೆಗಳ ಆಧಾರದ ಮೇಲೆ ಬಹು-ಸಂಪುಟಗಳ ಕೃತಿಗಳನ್ನು ರಚಿಸಿ ರಾಯಲ್ ಹಿಸ್ಟಾರಿಕಲ್ ಸೊಸೈಟಿಯ ಚುನಾಯಿತ ಸದಸ್ಯರಾಗಿದ್ದರೂ ಸಹ, ಅವರ ಸಂಶೋಧನೆಗಳು ಅವರ ಸಿದ್ಧಾಂತಗಳಿಗೆ ಹೊಂದಿಕೆಯಾಗದ ಕಾರಣ ಅವರನ್ನು ಇತಿಹಾಸಕಾರರೇ ಅಲ್ಲ, ಜನಪ್ರಿಯ ಲೇಖಕರೂ ಅಲ್ಲ; ಅವರು ಕೇವಲ ಹವ್ಯಾಸಿ ಬರಹಗಾರನಷ್ಟೇ ಎಂದು ತಳ್ಳಿಹಾಕಲು ಎಲ್ಲಾ ಸಕ್ರಿಯ ಪ್ರಯತ್ನಗಳು ನಡೆದವು.

ಈ ಗೇಟ್‌ಕೀಪರ್‌ಗಳ ಸಂದೇಶವು ಇದಕ್ಕಿಂತ ಸ್ಪಷ್ಟವಾಗಿರಲು ಸಾಧ್ಯವಿಲ್ಲ. ನಿಮ್ಮ ಡಾಕ್ಟರೇಟ್ ಏನೇ ಇರಲಿ, ನಿಮ್ಮ ಉಲ್ಲೇಖಗಳು ಏನೇ ಇರಲಿ, ಅವರ ಸದಸ್ಯತ್ವ ಕಾರ್ಡ್ ಇಲ್ಲದೆ ನೀವು ವೇದಿಕೆಗೆ ಬರಲು ಸಾಧ್ಯವಿಲ್ಲ. ಇದೇ ಗೇಟ್‌ಕೀಪರ್‌ಗಳು ವಿಶ್ವವಿದ್ಯಾಲಯಗಳ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ ಮತ್ತು ಮಗು ಏನನ್ನು ಓದಬೇಕು ಮತ್ತು ಏನನ್ನು ಓದಬಾರದು ಎಂಬುದನ್ನು ನಿರ್ಧರಿಸುವ ಸಮಿತಿಗಳಲ್ಲಿ ಕುಳಿತಿದ್ದಾರೆ. ಯಾವ ಸಂಶೋಧನೆಗೆ ಧನಸಹಾಯ ನೀಡಬೇಕು ಮತ್ತು ಯಾವುದಕ್ಕೆ ನೀಡಬಾರದು ಎಂಬುದನ್ನು ಅವರೇ ನಿರ್ಧರಿಸುತ್ತಾರೆ. ಯಾವ ದೇಶದ ಬಗೆಗೆ ಈಗಾಗಲೇ ಅವರು ನಿರ್ಣಯ ನೀಡಿದ್ದಾರೋ ಆ ದೇಶದ ಬಗೆಗೆ ಅವರು ವಿದೇಶಿ ಪತ್ರಿಕೆಗಳಲ್ಲಿ ಬರೆಯುತ್ತಾರೆ ಮತ್ತು ನಾನು ವಿವರಿಸುತ್ತಲೇ ಬಂದಿರುವ ವ್ಯವಸ್ಥಿತ ಪರಂಪರೆಯ ಉತ್ತರಾಧಿಕಾರಿಗಳು ಇವರೇ ಆಗಿದ್ದಾರೆ. ಕೊಮಿಂಟರ್ನ್ ಹೋಗಿದೆ. ಕಮ್ಯುನಿಸ್ಟ್ ಇಂಟರ್ನ್ಯಾಷನಲ್ ಇಲ್ಲವಾಗಿದೆ. ಆದರೆ ಅದು ನಮ್ಮಲ್ಲಿ ರೂಢಿಸಿ ಹೋದ ಅಭ್ಯಾಸವು ಮಾತ್ರ ಇನ್ನೂ ಹೋಗಿಲ್ಲ. ಸಾಕ್ಷ್ಯಗಳು ಏನನ್ನು ಹೇಳಬೇಕು ಎಂಬುದನ್ನು ಮೊದಲೇ ನಿರ್ಧರಿಸುವುದು ಮತ್ತು ನಂತರ ಆ ಸಾಕ್ಷ್ಯವನ್ನು ಬೇರೆ ರೀತಿಯಲ್ಲಿಕಾಣುವ ಯಾರನ್ನೇ ಆದರೂ ಪ್ರತಿಸ್ಪರ್ಧಿ ಎಂಬುದಕ್ಕಿಂತಲೂ ಹೆಚ್ಚಾಗಿ ಶತ್ರುವಿನಂತೆ ಕಾಣುವುದೇ ಅಭ್ಯಾಸವಾಗಿ ಹೋಗಿದೆ.

ಇದು ವಿಚಾರಣೆಗೆ ಮುನ್ನವೇ ತೀರ್ಪನ್ನು ನಿರ್ಧರಿಸುವುದಾಗಿದೆ ಮತ್ತು ಆದ್ದರಿಂದ, ಕೊನೆಯದಾಗಿ, ನಾನು ಇಂದು ಏನನ್ನು ಕೇಳುತ್ತಿದ್ದೇನೆ? ನಾವು ವೇದಿಕೆಯ ಒಂದು ಬದಿಯನ್ನು ಮೌನಗೊಳಿಸಲು ಕೇಳುತ್ತಿಲ್ಲ ಅಥವಾ ಏಕಸ್ವಾಮ್ಯವನ್ನು ಒಂದು ಬದಿಯಿಂದ ಇನ್ನೊಂದು ಬದಿಗೆ ಬದಲಾಯಿಸುವಲ್ಲಿ ನಾವು ಯಾವುದೇ ಆಸಕ್ತಿ ಹೊಂದಿಲ್ಲ. ಏಕಸ್ವಾಮ್ಯವು ಹಾಗೆಯೇ ಉಳಿದು ನಟರು ಕೇವಲ ಬದಿಗಳನ್ನು ಬದಲಾಯಿಸಿದರೆ, ಯಾವುದೂ ಮುಕ್ತವಾಗುವುದಿಲ್ಲ, ಕೇವಲ ಆಡಳಿತ ಬದಲಾಗುತ್ತದೆ ಅಷ್ಟೇ. 'ಘಟಶ್ರಾದ್ಧ'ದಂತಹ-ನೀವು ಇದರ ಬಗ್ಗೆ ಕೇಳಿರಬಹುದು- ವಿರೋಧಿ ಸಿದ್ಧಾಂತದ ಚಲನಚಿತ್ರವೊಂದು ತಯಾರಾದಾಗ, ಭಾರತ ಅದನ್ನು ವೀಕ್ಷಿಸಿತು. ಭಾರತದಲ್ಲಿ ಕೆಲವರು ಅದನ್ನು ಶ್ಲಾಘಿಸಿದರು ಮತ್ತು ಕೆಲವರು ಅದನ್ನು ಸಂಭ್ರಮಿಸಿದರು ಕೂಡ. ಆ ಉದಾರತೆಯು ಪರಸ್ಪರರಲ್ಲಿ ಇರಬೇಕು.

ನಾವು ಇಡೀ ರಂಗಭೂಮಿಯನ್ನು ಮರುಸ್ಥಾಪಿಸಲು ಕೇಳುತ್ತಿದ್ದೇವೆ.ಎಡಭಾಗದಲ್ಲಿಯೂ ಅವಕಾಶವಿರಲಿ, ಬಲಭಾಗದಲ್ಲಿಯೂ ಅವಕಾಶವಿರಲಿ ಮತ್ತು ಎಲ್ಲಾ ಸಿದ್ಧಾಂತಗಳ ಚಿಂತಕರು ಭೇಟಿಯಾಗಬಹುದಾದ ಮುಕ್ತವಾದ ಮಧ್ಯಭಾಗವಿರಲಿ. ಸಾಕ್ಷ್ಯಗಳನ್ನು ಸ್ವತಃ ತಾವೇ ಅಳೆದು ತೂಗಿ ನೋಡಬಲ್ಲದು ಎಂದು ನಂಬಲಾದ ವಿವೇಚನಾಶೀಲ, ಸೂಕ್ಷ್ಮದೃಷ್ಟಿಯುಳ್ಳ ಪ್ರೇಕ್ಷಕರ ಮುಂದೆ ವಿಚಾರಗಳು ಸಂಘರ್ಷಕ್ಕೊಳಪಡಲಿ. ಇಂದಿನ ಭಾರತವು ಆತ್ಮವಿಶ್ವಾಸದಿಂದ ಕೂಡಿದೆ ಮತ್ತು ಆ ಬಗ್ಗೆ ಯಾವುದೇ ಪಶ್ಚಾತ್ತಾಪವನ್ನು ಹೊಂದಿಲ್ಲ, ಹಾಗೂ ನಮ್ಮದೇ ಆದ ಪರಂಪರೆಯನ್ನು ಅಧ್ಯಯನ ಮಾಡಲು ನಾವು ಬೇರೆಯವರ ಅನುಮತಿಗಾಗಿ ಕಾಯುವುದನ್ನು ನಿಲ್ಲಿಸಿದ್ದೇವೆ. ನಾವು ನಮ್ಮ ಶಾಸನಗಳನ್ನು ಮತ್ತೊಮ್ಮೆ ಓದುತ್ತಿದ್ದೇವೆ, ನಮ್ಮ ಕಡಲ ವ್ಯಾಪಾರವನ್ನು ವಿಶ್ಲೇಷಿಸುತ್ತಿದ್ದೇವೆ, ನಮ್ಮ ಗಣಿತಶಾಸ್ತ್ರಕ್ಕೆ ಮರಳುತ್ತಿದ್ದೇವೆ, ಮತ್ತು ಈ ಕಥೆಗಳನ್ನು ನಿಜವಾದ ಸಂತೋಷ ಹಾಗೂ ನಿಜವಾದ ನಿಖರತೆಯೊಂದಿಗೆ ಹೇಳುತ್ತಿದ್ದೇವೆ. ವಸಾಹತುಶಾಹಿಯಿಂದ ಮುಕ್ತಿ ಪಡೆಯುವುದೆಂದರೆ ಇದೇ ಇರಬೇಕು ಎಂದು ನಾನು ಭಾವಿಸುತ್ತೇನೆ.

ಇದು ನಿಗದಿತ ಪಠ್ಯಪುಸ್ತಕವೊಂದನ್ನು ಮತ್ತೊಂದರ ಜೊತೆಗೆ ಬದಲಾಯಿಸುವುದಲ್ಲ.ಇದರರ್ಥ ವ್ಯಾಪಕವಾದ ದಾಖಲೆಗಳು, ಹೆಚ್ಚಿನ ಭಾಷೆಗಳು, ಕಠಿಣ ಪ್ರಶ್ನೆಗಳು ಮತ್ತು ನಿಜವಾಗಿಯೂ ಒದಲ್ಪಡುವ ವಿದ್ವಾಂಸರ ಇನ್ನೂ ದೊಡ್ಡ ವಲಯವಾಗಿರಬೇಕು. ಎಲ್ಲಕ್ಕಿಂತ ಮಿಗಿಲಾಗಿ, ಸಾಕ್ಷ್ಯಗಳು ಏನನ್ನು ಹೇಳಲು ಅನುಮತಿಸಬೇಕು ಎಂಬುದನ್ನು ಯಾವುದೇ ವ್ಯವಸ್ಥೆಯು ಮೊದಲೇ ನಿರ್ಧರಿಸಲು ಸಾಧ್ಯವಿಲ್ಲ ಎಂದಾಗಿರಬೇಕು. ಇತಿಹಾಸಕಾರರು, ಕಾದಂಬರಿಕಾರರು, ರೇಖಾಚಿತ್ರಕಾರರು ಮತ್ತು ಕಥೆಗಾರರಂತಹ ವೈವಿಧ್ಯಮಯ ಧ್ವನಿಗಳನ್ನು ಇಂದು ಗೌರವಿಸುತ್ತಿರುವ ಉದ್ದೇಶ ಇದೇ ಆಗಿದೆ. ಇವು ವೇದಿಕೆಯನ್ನು ಪ್ರವೇಶಿಸುತ್ತಿರುವ ಹೊಸ ಧ್ವನಿಗಳಾಗಿವೆ. ಡಾ. ಭೈರಪ್ಪನವರು ತಮ್ಮ 95ನೇ ವಯಸ್ಸಿನಲ್ಲಿ ನಮ್ಮನ್ನು ಅಗಲಿದರು. ಅವರು ದೋಷಾತೀತರಲ್ಲದಿರಬಹುದು ಮತ್ತು ಅವರು ಹಾಗೆಯೇ ಇದ್ದರು ಎಂದು ಸೋಗು ಹಾಕಿ ನಟಿಸುವ ಮೂಲಕ ನಾವು ಅವರಿಗೆ ಗೌರವ ಸಲ್ಲಿಸುತ್ತಿಲ್ಲ. ಆದಾಗ್ಯೂ, ಅವರು ಅತ್ಯಂತ ಪ್ರಾಮಾಣಿಕರಾಗಿದ್ದರು ಮತ್ತು ದೊಡ್ಡ ವೃತ್ತಿಪರ ನಷ್ಟವನ್ನು ಅನುಭವಿಸಿಯೂ ಪ್ರಾಮಾಣಿಕರಾಗುಳಿದರು. ಅವರು ತಮ್ಮ ವೃತ್ತಿಯನ್ನು ಸರಳವಾಗಿ ಸಂಕ್ಷಿಪ್ತವಾಗಿ ಹೀಗೆ ವಿವರಿಸಿದರು, "ಸಾಹಿತ್ಯದ ಕೆಲಸವೆಂದರೆ ಮಾನವನ ಸಂವೇದನೆಯನ್ನು ಪರಿಷ್ಕರಿಸಿ ಶುದ್ಧೀಕರಿಸುವುದು." ಅವರು ಎಂದಿಗೂ ಅನುಯಾಯಿಗಳ ಸೈನ್ಯವನ್ನು ಒಗ್ಗೂಡಿಸಲು ಬಯಸಲಿಲ್ಲ. ಮಾನವರು ಸತ್ಯವನ್ನು ಗ್ರಹಿಸುವ ವಿಧಾನವನ್ನು ಸಂಸ್ಕರಿಸಲು ಅವರು ಬಯಸಿದ್ದರು. ಸತ್ಯ ಮತ್ತು ಸೌಂದರ್ಯ. ತುಂಬಾ ಪುರಾತನವಾದ ನಮ್ಮ ನಾಗರಿಕತೆಯ ಪಾಲಿಗೆ ಇದು ನಿಜವಾಗಿಯೂ ಬೌದ್ಧಿಕ ಸ್ವರಾಜ್ಯದ ಕಾರ್ಯವಾಗಿದೆ. ಹೌದು ಪ್ರಸೇನ್‌ಜಿತ್, 91 ರಲ್ಲಿ ನಮಗೆ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿತು ಎಂದು ನೀವು ಹೇಳಿದ್ದು ಸರಿಯಾಗಿತ್ತು. ಆದರೆ ಬೌದ್ಧಿಕ ಸ್ವಾತಂತ್ರ್ಯವು ಈಗಷ್ಟೇ ಬಲವನ್ನು ಪಡೆದುಕೊಳ್ಳುತ್ತಿದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಬೌದ್ಧಿಕ ಸ್ವಾತಂತ್ರ್ಯವು ನಮ್ಮನ್ನು ನಾವು ತಿಳಿದುಕೊಳ್ಳುವ ಹಕ್ಕನ್ನು ನಮಗೆ ನೀಡಬೇಕು. ಇವತ್ತು ಸೆಪ್ಟೆಂಬರ್ 5; ಇಂದು ನಮ್ಮ ಶಿಕ್ಷಕರಿಗೆ ಮತ್ತು ಇಂದಿನ ಚಿಂತಕರಾದ ಡಾ. ಭೈರಪ್ಪನವರಿಗೆ ನಾವು ಸಲ್ಲಿಸಬಹುದಾದ ಅತ್ಯುತ್ತಮ ಗೌರವವೆಂದರೆ, ಭಾರತದ ಬೌದ್ಧಿಕ ರಂಗಭೂಮಿಯ ಎರಡೂ ಪಾರ್ಶ್ವಗಳನ್ನು ಪ್ರಕಾಶಮಾನವಾಗಿ ಬೆಳಗಿಸುವುದು; ಇದರಿಂದ ಪ್ರದರ್ಶನವು ಮುಂದುವರೆಯಬಹುದು. ಮಂಥನವು ಮುಂದುವರೆಯಲಿ; ಸಾಕ್ಷ್ಯ, ಕಟ್ಟುನಿಟ್ಟಿನ ವಿಶ್ಲೇಷಣೆ ಹಾಗೂ ಜಾಗೃತ ಅಂತಸ್ಸಾಕ್ಷಿಯೇ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಲಿ. ಮತ್ತು ನಾವೆಲ್ಲರೂ ಒಟ್ಟಾಗಿ ಭಾರತವನ್ನು ಬೌದ್ಧಿಕ ಸ್ವರಾಜ್ಯದ ಈ ಸುವರ್ಣ ಯುಗದತ್ತ ಮುನ್ನಡೆಸೋಣ.

ಧನ್ಯವಾದಗಳು.